ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮಾರ್ಚ್ 2019
ಬೆಲೆ ರೂ. 1



ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ **'ಸಾಹಿತ್ಯಶ್ರೀ'** ಪ್ರಶಸ್ತಿ



## ಇನ್ನು ಇಂಗ್ಲೀಷ್ ಭಾಷೆಯಲ್ಲೂ ಲಭ್ಯ ರನ್ನನ 'ಗದಾಯುದ್ಧ'

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಮಾರ್ಚ್, 2019ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಮಾರ್ಚ್, 2019ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 31 ಮಾರ್ಚ್, 2019ರಂದು ಬೆಳಿಗ್ಗೆ 11 ಗಂಟೆಯಿಂದ

## ಉಪನ್ಯಾಸ ಹಾಗೂ ವೈದ್ಯಕೀಯ ಸಲಹೆ



**ಡಾ. ಭೀಮ ಭಟ್ ಅವರಿಂದ**
**"ವನಸ್ಪತಿಗಳ ಔಷಧೀಯ ಉಪಯೋಗ"**
**ಕುರಿತು ಉಪನ್ಯಾಸ**

ಹೋಲಿ ಫ್ಯಾಮಿಲಿ ಆಸ್ಪತ್ರೆಯ ಹಿರಿಯ ಆಯುರ್ವೇದ ವೈದ್ಯರಾದ **ಡಾ. ಭೀಮ ಭಟ್** ಅವರು ಕಳೆದ ಮೂರು ದಶಕಗಳಿಂದ ತಿಂಗಳ ಕೊನೆಯ ಭಾನುವಾರ ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆಯನ್ನು ನೀಡುತ್ತಾ ಬಂದಿದ್ದಾರೆ.

**ಮಾರ್ಚ್ 31ರ ಭಾನುವಾರ ಅಪರಾಹ್ನ 3.00 ರಿಂದ 4.30ರವರೆಗೆ ಉಪನ್ಯಾಸ ಹಾಗೂ ಸಂಜೆ : 4.30 ರಿಂದ 5.30 ರವರೆಗೆ ಉಚಿತ ವೈದ್ಯಕೀಯ ಸಲಹೆಯನ್ನು** ನೀಡಲಿದ್ದಾರೆ. ಸಂಘದ ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು.



**ದೆಹಲಿ ಕರ್ನಾಟಕ ಸಂಘದ**
ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ.
ಫೋನ್ : 011–26109615 / 26104818



ದಿನಾಂಕ 15.02.2019ರಂದು ಭಾನುವಾರ ನಡೆದ 'ಹಿರಿಯ ಕಲಾವಿದರೊಂದಿಗೆ ಒಂದು ಸಂಜೆ' ಮತ್ತು ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಯಕ್ಷಗಾನದ ಹಿರಿಯ ಕಲಾವಿದ, ಸಂಘಟಕ ಶ್ರೀ ಕೆರೆಮನೆ ಶಿವಾನಂದ ಹೆಗಡೆ ಅವರನ್ನು ಸ್ವಾಗತಿಸಲಾಯಿತು.

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪುಟ 29 ಸಂಚಿಕೆ 6
ಮಾರ್ಚ್ 2019

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

ಮುಖಪುಟ ಚಿತ್ರ ಕೃಪೆ
ಶ್ರೀ ದಿನೇಶ್ ಶೆಣೈ

# ಸಂಪಾದಕೀಯ

## ಪ್ರಶಸ್ತಿ, ಸನ್ಮಾನಗಳ ಮೌಲ್ಯ ಹೆಚ್ಚುವ ಸಂದರ್ಭಗಳು

ವೈದ್ಯರುಗಳ ಸಮ್ಮೇಳನದಲ್ಲಿ ಇಂಜಿನಿಯರುಗಳನ್ನು ಸನ್ಮಾನಿಸುವುದು ಮತ್ತು ಇಂಜಿನಿಯರುಗಳ ಸಮ್ಮೇಳನದಲ್ಲಿ ವಕೀಲರನ್ನು ಸನ್ಮಾನಿಸುವುದು ಅಸಂಬದ್ಧ. ಬೌದ್ಧಿಕ ವರ್ಗ ತುಂಬಿರುವ ಸಾಹಿತ್ಯ ಸಮ್ಮೇಳನಗಳಲ್ಲಿ ಉದ್ಯಮಿಗಳನ್ನು, ಕಲಾವಿದರನ್ನು, ಸಂಘಟಕರನ್ನು, ಕ್ರೀಡಾಪಟುಗಳನ್ನು ಸೇರಿದಂತೆ ಸಾಹಿತಿಗಳಲ್ಲದವರನ್ನು ಈಚೆಗೆ ಪುರಸ್ಕರಿಸಲಾಗುತ್ತಿದೆ. ಇದು ಸರಿಯಾದ ಕ್ರಮವಲ್ಲ. ಆಯಾ ಕ್ಷೇತ್ರದ ಸಾಧಕರನ್ನು ಗುರುತಿಸಲು ಅವರದ್ದೇ ಆದ ಅಕಾಡೆಮಿಗಳು, ಸಂಘ ಸಂಸ್ಥೆಗಳೂ ಇವೆ. ಅರ್ಹರನ್ನು ಸೂಕ್ತ ವೇದಿಕೆಗಳಲ್ಲಿ ಪುರಸ್ಕರಿಸಿದಾಗ ಆ ಸಂಮಾನಕ್ಕೆ ಅರ್ಥವಿರುತ್ತದೆ. ಅರ್ಹರಿಗೆ ಪ್ರಶಸ್ತಿ ಬಂದಾಗ ಅದು ಆಯಾ ಪ್ರಶಸ್ತಿಯ ಮೌಲ್ಯ ಹೆಚ್ಚುವ ಸಂದರ್ಭಗಳು ಎನಿಸಿಕೊಳ್ಳುತ್ತದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮೊದಲಾದುವುಗಳು ಕನ್ನಡ ಭಾಷೆ, ಸಾಹಿತ್ಯದ ಬೆಳವಣಿಗೆಗೆ ಕರ್ನಾಟಕದಲ್ಲಿ ಸ್ಥಾಪನೆಗೊಂಡಿರುವ ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳು. ಈ ಸಂಸ್ಥೆಗಳು ಆಯೋಜಿಸುವ ಸಮ್ಮೇಳನ ಮತ್ತು ಸಮಾವೇಶಗಳಲ್ಲಿ ಭಾಷೆ ಮತ್ತು ಸಾಹಿತ್ಯಕ್ಕಾಗಿ ದುಡಿದ ಮಹನೀಯರನ್ನು ಗುರುತಿಸಿ ಸಂಮಾನಿಸುವ ಮತ್ತು ಪ್ರಶಸ್ತಿ ನೀಡಿ ಗೌರವಿಸುವ ಕೆಲಸವನ್ನು ಮಾಡುತ್ತಿದೆ. ಆದರೆ ಹೀಗೆ ಮಾಡುವಾಗ ನಿರ್ಧಿಷ್ಟ ಮಾನದಂಡಗಳೊಂದಿಗೆ ಪಾರದರ್ಶಕವಾಗಿ ನಡೆದುಕೊಳ್ಳುವುದು ಮುಖ್ಯ. ಈ ಕುರಿತು ಒಂದು ಸ್ಪಷ್ಟ ನೀತಿಯನ್ನು ರಚಿಸುವ ಅಗತ್ಯವಿದೆ.

ಈ ಬಾರಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳ ಘೋಷಣೆಯು ನಮ್ಮ ಸಂತಸವನ್ನು ಹೆಚ್ಚಿಸಿದೆ. ದೆಹಲಿಯಲ್ಲಿರುವ ಹಿರಿಯ ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆಯರಿಗೆ 'ಸಾಹಿತ್ಯಶ್ರೀ' ಗೌರವ ಪ್ರಶಸ್ತಿ ನೀಡಲಾಗಿದೆ. ದೆಹಲಿಯಲ್ಲಿ ಕಳೆದ ಎರಡು ದಶಕಗಳಿಂದ ನೆಲೆಸಿರುವ ಡಾ. ಬಿಳಿಮಲೆಯವರು ಅಮೇರಿಕಾದ ಭಾರತೀಯ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಜೆ.ಎನ್.ಯು.ವಿನ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿ ಆಡಳಿತಾತ್ಮಕ ಕೆಲಸಗಳೊಂದಿಗೆ ಸಾಹಿತ್ಯ, ಬರವಣಿಗೆಗಳಲ್ಲಿ ನಿರಂತರ ತೊಡಗಿಸಿಕೊಂಡಿದ್ದು ಅವರ ಕ್ರಿಯಾಶೀಲತೆಗೆ ನಿದರ್ಶನ. ಬಿಳಿಮಲೆಯವರು ಇನ್ನೂ ಹೆಚ್ಚಿನ ಪ್ರಶಸ್ತಿಗೆ ಅರ್ಹರು. ಮುಂದಿನ ದಿನಗಳಲ್ಲಿ ಅವರಿಗೆ ಉನ್ನತ ಪ್ರಶಸ್ತಿಗಳು ಬರಲಿ ಎಂದು ಹಾರೈಸುವ.

ಇದೇ ಸಂದರ್ಭದಲ್ಲಿ ಹಿರಿಯ ಸಾಹಿತಿಗಳಾದ ಡಾ. ಬಿ.ಎ. ವಿವೇಕ ರೈ ಮತ್ತು ಡಾ.ಎಚ್.ಎಸ್. ವೆಂಕಟೇಶ ಮೂರ್ತಿ ಸೇರಿದಂತೆ ಐವರಿಗೆ ಗೌರವ ಪ್ರಶಸ್ತಿ ನೀಡಿದ್ದು ನಮ್ಮ ಸಂತಸವನ್ನು ಇಮ್ಮಡಿಗೊಳಿಸಿದೆ. ಈ ಹಿರಿಯ ಸಾಹಿತಿಗಳು ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿಯ ಕನ್ನಡ ವಲಯದೊಂದಿಗೆ ಆತ್ಮೀಯ ಮತ್ತು ನಿಕಟ ಸಂಬಂಧ ಹೊಂದಿದ್ದಾರೆ. ಎಲ್ಲ ಪುರಸ್ಕೃತರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು ಮತ್ತು ಶುಭಾಶಯಗಳು.



*ಡಾ. ಅವನೀಂದ್ರನಾಥ್ ರಾವ್*

ಈ ಬಾರಿಯ ಅಭಿಮತದ ಮುಖಪುಟ ಚಿತ್ರವು 'ಗದಾಯುದ್ಧ' ಯಕ್ಷಗಾನದ ದೃಶ್ಯವಾಗಿದೆ. ಜೆ.ಎನ್.ಯು.ವಿನ ಕನ್ನಡ ಅಧ್ಯಯನ ಪೀಠದ ಆಶ್ರಯದಲ್ಲಿ ದಿನಾಂಕ 16.02.2019ರಂದು ನಡೆದ ಯಕ್ಷಗಾನದ ದೃಶ್ಯವನ್ನು ಸೆರೆ ಹಿಡಿದವರು ಛಾಯಾಗ್ರಾಹಕ ಶ್ರೀ ದಿನೇಶ್ ಶೆಣೈ. ಇಡಗುಂಜಿಯ ಮಹಾಗಣಪತಿ ಯಕ್ಷಗಾನ ಮಂಡಳಿ ಪ್ರದರ್ಶಿಸಿದ ಈ ಯಕ್ಷಗಾನ ಪ್ರಸಂಗದಲ್ಲಿ ಭೀಮ ದುರ್ಯೋಧನನ್ನು ಗದಾಘಾತದಿಂದ ಧರೆಗುರುಳಿಸಿದ ಚಿತ್ರ ಇದಾಗಿದೆ. ಇಲ್ಲಿನ ಅಪೂರ್ವ ಚಿತ್ರಗಳನ್ನು ಒದಗಿಸಿದ ದಿನೇಶ್ ಶೆಣೈ ಅವರಿಗೆ ನಮ್ಮ ಕೃತಜ್ಞತೆಗಳು.

*ಪ್ರಧಾನ ಸಂಪಾದಕ*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 29 ಸಂಚಿಕೆ 6
ಮಾರ್ಚ್ 2019, ಬೆಲೆ ರೂ. 1

ನಮ್ಮನಮ್ಮೊಳಗೆ

# ನಾಮವರ್ ಸಿಂಗ್ ಅವರ ನೆನಪಿನಲ್ಲಿ

ನಮ್ಮ ದೇಶದ ಭಾಷಾ ಸಾಹಿತ್ಯಕ್ಕೆ ಸಾವಿರಾರು ವರ್ಷಗಳಿಗೂ ಮೀರಿದ ಬಹು ದೊಡ್ಡ ಪರಂಪರೆಯಿದೆ. ಇದರ ವೈವಿಧ್ಯತೆಯಲ್ಲಿಯೇ ನಮ್ಮ ದೇಶದ ವಿಶಿಷ್ಟತೆ ಅಡಗಿದೆಯೆಂದರೆ ಅತಿಶಯೋಕ್ತಿಯಾಗಲಾರದು. ನೂರಾರು ಭಾಷೆಗಳು, ಉಪಭಾಷೆಗಳು, ಅದಕ್ಕನುಗುಣವಾದ ಸಾಂಸ್ಕೃತಿ ಆಯಾಮಗಳು ದಕ್ಷಿಣ ಏಶಿಯಾದ ಉದ್ದಕಲಕ್ಕೂ ಹರಡಿಕೊಂಡಿವೆ. ನಮ್ಮ ಸಂವಿಧಾನದವೇ ಈಗ 22 ಭಾಷೆಗಳನ್ನು ತನ್ನ ಪರಿವಿಡಿಯಲ್ಲಿ ಸೇರಿಸಿಕೊಂಡಿದೆ. ಇದರಲ್ಲಿ ನಮ್ಮ ದೇಶದ ಎಲ್ಲ ಪ್ರಮುಖ ಭಾಷೆಗಳು ಸೇರಿವೆ. ಕನ್ನಡವಂತೂ ಮೊದಲಿನಿಂದಲೇ ಇದೆ. ಈ 22 ಭಾಷೆಗಳ ಜೊತೆಗೆ ಇತರ ಸುಮಾರು 42 ಭಾಷೆಗಳನ್ನು ಸೇರಿಸಿಕೊಳ್ಳಬೇಕೆಂಬುದರ ಬಗ್ಗೆ ಒತ್ತಾಸೆಯಿದೆ. ಇದರಲ್ಲಿ ನಮ್ಮ ಕರ್ನಾಟಕದ ತುಳು ಮತ್ತು ಕೊಡವ ಭಾಷೆಗಳೂ ಸೇರಿವೆ. ಸಂವಿಧಾನದ ಬೆಂಬಲವಿರುವ ಭಾಷೆಗಳಿಗೆ ಧನಸಹಾಯವಲ್ಲದೆ ಇನ್ನೂ ಹಲವಾರು ಬಗೆಯ ಸವಲತ್ತುಗಳು ದೊರಕುತ್ತವೆ. ಅದರಲ್ಲಿ ಮುಖ್ಯವಾದದ್ದು ಸಾಹಿತ್ಯವನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದ ಮಾಡುವುದು ಅತ್ಯಂತ ಪ್ರಮುಖವಾದದ್ದು. ನಾವೆಲ್ಲ ನಮಗೆ ಪರಕೀಯವಾದ ಆಂಗ್ಲ ಭಾಷೆಯಲ್ಲಿ ಸಾರಸಗಟಾಗಿ ವ್ಯವಹರಿಸುತ್ತೇವೆ. ಈ ಆಂಗ್ಲ ಭಾಷೆಯೆಂಬುದು ನಮ್ಮನ್ನು ಜಾಗತಿಕರಣದ ಹೆಬ್ಬಾಗಿಲಿನತ್ತ ಕರೆದುಕೊಂಡು ಹೋಗಬಲ್ಲ ಭಾಷೆಯಾಗಿ ಪರಿಣಮಿಸಿದ್ದರಿಂದ ನಾವು ನಮ್ಮ ಮನೆಯೊಳಕ್ಕೆ ಅಡಗಿರುವ ಅದ್ಭುತವಾದ ಭಾಷಾಸಂಪತ್ತನ್ನು ಮರೆತು ಕುಳಿತಂತಾಗಿದೆ. ಬರಿ ಕನ್ನಡವೊಂದೆ ಅಲ್ಲ, ನಮ್ಮ ಅಕ್ಕಪಕ್ಕ ಮನೆಗಳಲ್ಲಿ ತುಂಬಿರುವ ತೆಲುಗು, ತಮಿಳು, ಬಂಗಾಳಿ, ಹಿಂದಿ...ರಾಜಸ್ತಾನಿ ಹೀಗೆ ಹತ್ತು ಹಲವಾರು ಭಾಷೆಗಳ ಸಾಹಿತ್ಯಕ ದೃಷ್ಟಿಕೋಣಗಳನ್ನು, ಅವುಗಳಿಂದ ಉದ್ಭವಿಸಿ ಬರುವ ನಮ್ಮ ಬಹುಬಗೆಯ ಸಾಂಸ್ಕೃತಿಕ ಒಲವುಗಳನ್ನು ಗಮನಿಸಿದರೆ ಇದು ನಮಗೆ ಅರ್ಥವಾಗುತ್ತದೆ. ನಮ್ಮ ಕನ್ನಡವೆಂಬುದು ಒಂದು ದ್ವೀಪದೋಪಾದಿಯಲ್ಲಿ ಕುಳಿತರೆ, ಅದರ ಮೇಲೆ ಇತರ ಸಾಂಸ್ಕೃತಿಕ ಗಾಳಿ ಬೀಸದಿದ್ದರೆ ಅದು ನಿಂತ ನೀರಾಗಿ ಬಿಡುತ್ತದೆ. ಎಲ್ಲ ಕಡೆಯ ಗಾಳಿ ನಮ್ಮತ್ತ ಬೀಸಬೇಕು. ನಮ್ಮ ಮನೆಯ ಮೇಲಿಂದ ಹಾದು ಹೋಗುವ ಗಾಳಿ ಬೀಸಿ ಇನ್ನಿತರ ಬಳಿ ಸಾಗಬೇಕು. ಆಗಲೆ ನಮ್ಮ ಕನ್ನಡದ ಸಾಂಸ್ಕ್ರತಿಕ ಲೋಕದಲ್ಲಿ ಹೊಸ ಆಯಾಮಗಳು ಗೋಚರಿಸಲು ಸಾಧ್ಯವಾಗತ್ತದೆ.

ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ನಮ್ಮನ್ನೆಲ್ಲ ಬಿಟ್ಟು ಅಗಲಿದ ಹಿಂದಿ ಸಾಹಿತ್ಯ ಪ್ರಪಂಚದ ಬಹುದೊಡ್ಡ ಅಲೋಚಕ ಮತ್ತು ವಿಮರ್ಶಕ ಪ್ರೊ. ನಾಮವರ್ ಸಿಂಗ್‌ರವರನ್ನು ನಾವು ನೆನೆಸಿಕೊಳ್ಳಬೇಕು. ಅವರು ಹಿಂದಿ ಸಾಹಿತ್ಯ ಪರಂಪರೆಯನ್ನು ನೋಡುವ ಮತ್ತು ಅಭ್ಯಸಿಸುವ ಬಗೆಗೆ ತಂದ ಬದಲಾವಣೆಗಳನ್ನು ಕನ್ನಡ ಮತ್ತು ಇತರ ಭಾಷಾ ಸಾಹಿತ್ಯ ಪರಂಪರೆಗಳು ಸೂಕ್ಷ್ಮವಾಗಿ ಗಮನಿಸುವ ಅಗತ್ಯವಿದೆಯೆಂಬುದು ನನ್ನ ಅಭಿಪ್ರಾಯ. ಅವರಿಗೆ ಕುವೆಂಪು ರಾಷ್ಟ್ರೀಯ ಪ್ರಶಸ್ತಿಯನ್ನು ನಮ್ಮ ಕುವೆಂಪು ಪ್ರತಿಷ್ಠಾನ 2014ರಲ್ಲಿ ನೀಡುವುದರ ಮೂಲಕ ಈ ಬಗೆಯ ಅಂತರ ಭಾರತೀಯ ಸಾಹಿತ್ಯಿಕ ಸೇತುವೆಯನ್ನು ನಿರ್ಮಿಸಿದ್ದು ಅತ್ಯಂತ ಸಮಯೋಚಿತವಷ್ಟೆ ಅಲ್ಲ, ಇದು ಭಾರತೀಯ ಭಾಷಾ ಸಾಹಿತ್ಯಗಳ ನಡುವೆ ಬಾಂಧವ್ಯದ ಸೇತುವೆಯನ್ನು ನಿರ್ಮಿಸಿದೆ ಎಂದರೆ ತಪ್ಪಲ್ಲ. ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಅವರಿಗೆ ದೆಹಲಿಯಲ್ಲಿ ಪ್ರತಿಷ್ಠಿತ ಕುವೆಂಪು ರಾಷ್ಟ್ರೀಯ ಪುರಸ್ಕಾರ ಪ್ರದಾನವಾದದ್ದು ನಮಗೆಲ್ಲ ಹೆಗ್ಗಳಿಕೆಯ ಸಂಗತಿ. ತೊಂಬತ್ತು ವಸಂತಗಳನ್ನು ದಾಟಿ ಬದುಕಿದ ಪ್ರೊ. ನಾಮವಾರ್ ಸಿಂಗರವರು ಹುಟ್ಟಿದ್ದು, ಬೆಳೆದಿದ್ದು, ಓದಿದ್ದು...ಎಲ್ಲ ಉತ್ತರ ಪ್ರದೇಶದ ವಾರಣಾಸಿಯಲ್ಲಿ. ಅಲ್ಲೇ ಹತ್ತಿರದ ಹಳ್ಳಿಯಿಂದ ಬಂದ ಅವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ (ಬಿ.ಎಚ್ .ಯು) 1953ರಲ್ಲಿ ತಮ್ಮ ಡಾಕ್ಟರೇಟನ್ನು ಆಗಿನ ಹಿಂದಿ ಸಾಹಿತ್ಯದ ದಿಗ್ಗಜರಾಗಿದ್ದ ಹಜಾರಿ ಪ್ರಸಾದ ದ್ವಿವೇದಿಯವರ ಸುಪರ್ದಿಯಲ್ಲಿ ಮುಗಿಸಿ, ಅಲ್ಲೇ ಅಧ್ಯಾಪಕರಾಗಿ ಕೆಲಸ ಮಾಡಿ ನಂತರದಲ್ಲಿ ತಮ್ಮ ರಾಜಕೀಯ ಒಲವುಗಳಿಂದಾಗಿ ತಮ್ಮ ಬಿ.ಎಚ್.ಯು.ವಿನ ಕೆಲಸವನ್ನು ಬಿಟ್ಟು ಉತ್ತರ ಭಾರತದ ಹಲವೆಡೆ ಕೆಲಸ ಮಾಡುವಂತಾಯಿತು. ಅಷ್ಟೊತ್ತಿಗಾಗಲೆ ಅವರು ಹಿಂದಿ ಸಾಹಿತ್ಯ ಪ್ರಕಾರದ ವಿಮರ್ಶಕರಾಗಿ ಪ್ರಸಿದ್ಧರಾಗಿದ್ದರು. ತಮ್ಮ ಗುರುಗಳಾಗಿದ್ದ ಪ್ರೊ. ದ್ವಿವೇದಿಯವರಿಗಿಂತ ಎರಡು ವರ್ಷ ಮೊದಲೆ (1971ರಲ್ಲಿ) ಅವರು ತಮ್ಮ ಹಿಂದಿ ಸಾಹಿತ್ಯದ ಕವಿತೆಗಳ ಹೊಸ ಆಯಾಮಗಳ ಬಗ್ಗೆ ಬರೆದ ಅತ್ಯಂತ ಪ್ರಭಾವಶಾಲಿಯಾದ ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕೆಡಮಿಯ ಪ್ರಶಸ್ತಿಯನ್ನು ಪಡೆದು ಬಿಟ್ಟಿದ್ದರು. 1974ರಲ್ಲಿ ಅವರು ದೆಹಲಿಯ ಜವಾಹರಲಾಲ ನೆಹರು ವಿಶ್ವವಿದ್ಯಾಲಯದಲ್ಲಿ (ಜೆ.ಎನ್.ಯು) ಭಾರತೀಯ ಭಾಷಾ ಸಂಸ್ಥಾನದ ಹಿಂದಿ ವಿಭಾಗದ ಮೊದಲ ಮುಖ್ಯಸ್ಥರಾಗಿ, ಪ್ರೊಫೆಸರಾಗಿ 1992 ರವರೆಗೂ ಕೆಲಸ ಮಾಡಿ, ನಂತರ ಅಲ್ಲೇ ಎಮರಿಟಸ್ ಪ್ರೊಫೆಸರ್ ಆಗಿ ತಮ್ಮ ಜೀವನದ ಕೊನೆಯ ಕ್ಷಣಗಳವರೆಗೂ ಕೆಲಸ ಮಾಡಿದರು.

1987ರಲ್ಲಿ ಅಂತರರಾಷ್ಟ್ರೀಯ ಕಾನೂನು ವಿಭಾಗಕ್ಕೆ ವಿದ್ಯಾರ್ಥಿಯಾಗಿ ಬಂದ ನನಗೆ ಪ್ರೊ. ನಾಮವರ್ ಸಿಂಗ್‌ರವರ ಬಗ್ಗೆ ಏನೆನೂ ಗೊತ್ತಿರಲಿಲ್ಲ. ಆದರೆ ಅದೇ ವರ್ಷ ನವೆಂಬರ ತಿಂಗಳಿನ ಆಸುಪಾಸಿನಲ್ಲಿ ರಾಜಸ್ತಾನದಲ್ಲಿ ಸತಿಯಾಗಿ ಚಿತೆಯೇರಿದ ಮಹಿಳೆಯೊಬ್ಬರು ದೇಶದ ತುಂಬೆಲ್ಲ ಹಾಹಾಕಾರವನ್ನು ಎಬ್ಬಿಸಿದ್ದರ ಹಿನ್ನಲೆಯಲ್ಲಿ ಜೆ.ಎನ್.ಯು.ವಿನ ಕಾವೇರಿ ಹಾಸ್ಟೇಲಿನಲ್ಲಿ ನಡೆದ ಚರ್ಚೆಯಲ್ಲಿ ಭಾಷಣ ಮಾಡಲು ಅವರು ಬಂದಿದ್ದರು. ಎಲ್ಲ ಹೊಸ ಹುಡುಗರಂತೆ ಕುತೂಹಲದಿಂದ ನಾನು ಆಗ ವಾಸವಾಗಿದ್ದ ಕಾವೇರಿ ಹಾಸ್ಟೇಲಿನ ಡೈನಿಂಗ್ ಹಾಲ್‌ಗೆ ಈ ಭಾಷಣವನ್ನು ಕೇಳಲು ಹೋಗಿದ್ದೆ. ಅಪ್ಪಟ ಬಿಳಿಯ ಧೋತಿ ಮತ್ತು ಜುಬ್ಬಾ ಧರಿಸಿ, ಉತ್ತರ ಪ್ರದೇಶದ ಪರಿಯ ಕಪ್ಪಿನ ಪಂಪ್ ಶೂ ಧರಿಸಿ ನಿಧಾನವಾಗಿ ನಮ್ಮ ಡೈನಿಂಗ್ ಹಾಲ್‌ನ್ನು ಅವರು ಪ್ರವೇಶಿಸಿದಾಗ ನಮ್ಮ ಊಟದ ಮನೆ ಅವರ ಮಾತನ್ನು ಕೇಳಲು ಕಿಕ್ಕಿರಿದು ತುಂಬಿತ್ತು. ತಲೆಗೂದಲನ್ನು ಹಿಂಬದಿಗೆ ಒರಣವಾಗಿ ಬಾಚಿಕೊಂಡು, ತಮ್ಮ ಹರವಾದ ಮುಖದಲ್ಲಿ ಮುಗಳ್ನಗುತ್ತ ಅವರು ಬಂದು ಆಸೀನರಾದರು. ಇನ್ನೂ ಒಬ್ಬಿಬ್ಬರು ಮಾತನಾಡುವವರಿದ್ದರೆಂಬುದು ನನ್ನ ನೆನಪು. ಎಲ್ಲಾ ಹಿಂದಿಮಯ. ಆಗತಾನೆ ದೆಹಲಿಗೆ ಬಂದ ನನಗೆ ಯುಪಿ, ಎಮ್ ಪಿ ಹಿಂದಿ ಬೇರೆ ತರಹ, ಪಂಜಾಬು-ಹರಿಯಾಣದ ಹಿಂದಿಯ ಪರಿಯೇ ಬೇರೆ ತರಹ ಎಂದೆಲ್ಲ ಇನ್ನೂ ನನಗೆ ಗೊತ್ತಾಗಿರಲಿಲ್ಲ. ಆದರೆ ಅಂದು ನಾಮವರ್ ಸಿಂಗ್ ರವರು ಹಿಂದಿಯಲ್ಲಿ ಮಾತನಾಡಲು ಪ್ರಾರಂಭಿಸಿದಾಗ ಈ ಭಾಷೆಯ ಸುಂದರತೆಯ ಸೊಗಡಿನ ಅರಿವಾಯಿತು. ಮೆಲುವಾಗಿ, ಖಚಿತತೆಯ ಧ್ವನಿಯಲ್ಲಿ ಮತ್ತು ನಿರರ್ಗಳವಾಗಿ ಅವರು ಮಾತನಾಡಿದ ಪರಿ ನನ್ನನ್ನು ಮೋಡಿಗೊಳಗೊಳ್ಳುವಂತೆ ಮಾಡಿದ್ದು ಸತ್ಯ. ಅವರು ವಿಚಾರವನ್ನು ಮಂಡಿಸಿದ ಪರಿ ಇನ್ನೂ ಮುಖ್ಯವಾದದ್ದು. ಸತಿಯಾದ ಹೆಣ್ಣುಮಗಳನ್ನು, ಅವಳನ್ನು ದೇವಿಯೆಂದು ನಂಬಿದವರನ್ನು ಅವರು ಮೂಢರು ಎನ್ನಲಿಲ್ಲ. ಆ ಜನಸಮುದಾಯದ ಬದುಕು, ನಂಬಿಕೆ, ಸಂಸ್ಕೃತಿ, ಜೀವನಕ್ರಮಗಳನ್ನೆಲ್ಲ ತಮ್ಮ ಸಾಹಿತ್ಯದ ಪರಿಕರಗಳ ಮೂಲಕ ಅವರು ಅಳೆದ ರೀತಿ ವಿಶಿಷ್ಟವಾಗಿತ್ತು. ಅವರು ರಾಜಸ್ತಾನದಲ್ಲಿ ಅಧ್ಯಾಪಕರಾಗಿ ಕೆಲ ವರ್ಷಗಳ ಕಾಲ ಕೆಲಸ ಮಾಡಿದ್ದರ ಪರಿಣಾಮವಾಗಿ ಅವರು ಅಲ್ಲಿನ ಜನಜೀವನವನ್ನು ಆಳವಾಗಿ ಅರಿತಿದ್ದರು. ಹಾಗೆಂದು ಅವರು ಸತಿಯನ್ನು ಸಮರ್ಥಿಸದೆ ಅದಕ್ಕೆ ಬೇಕಾದ ಪರಿಹಾರಗಳನ್ನು ಅವರು ಸೂಚಿಸಿದ ರೀತಿ ಅವರ ಅಲೋಚನಾ ಕ್ರಮವನ್ನು ಮತ್ತು ಒಂದು ಜನಾಂಗದ ಸಂಸ್ಕೃತಿಯನ್ನು ಅರಿತುಕೊಳ್ಳುವ

ಬಗೆಯನ್ನು ನನ್ನ ಮುಂದೆ ಇರಿಸಿತ್ತು.

ಜೆ.ಎನ್.ಯು.ವಿನಲ್ಲಿ ನಂತರದಲ್ಲಿ ಇದ್ದ ವರ್ಷಗಳಲ್ಲಿ ಅವರ ಭಾಷಣಗಳನ್ನು ನಾನು ಕೇಳುವುದಕ್ಕೆ ಹೋಗುವುದನ್ನು ತಪ್ಪಿಸಲಿಲ್ಲ. ಅವರ ಬಗ್ಗೆ ವಿಸ್ತ್ರತವಾಗಿ ಬರೆಯಬೇಕಾದ್ದು ಸಾಕಷ್ಟಿದೆ. ಅವರ ಗರಡಿಯಲ್ಲಿ ಪಳಗಿ ಈಗ ಹಿಂದಿ ಸಾಹಿತ್ಯದಲ್ಲಿ ಅಪಾರ ಕೆಲಸ ಮಾಡುತ್ತಿರುವ ಆಗಿನ ಜೆ.ಎನ್.ಯು.ವಿನ ಹಲವರ ಸ್ನೇಹ ನನಗಿದ್ದದ್ದರ ಕಾರಣ ನಾಮವಾರಜಿಯವರೇ. 1990ರಲ್ಲಿ ಬಿ.ವಿ ಕಾರಂತರನ್ನು ಜೆ.ಎನ್.ಯು.ದ ಶರಾವತಿ ಕರ್ನಾಟಕ ಸಂಘದಲ್ಲಿ ಮಾತನಾಡಲು ಸಟ್ಲೆಜ್ ಹಾಸ್ಟೇಲಿನ ಡೈನಿಂಗ್ ಹಾಲಿನಲ್ಲಿ (ಜೆ.ಎನ್.ಯು.ವಿನ ಈ ಬಗೆಯ ರಾತ್ರಿಯ ಊಟದ ನಂತರದ ಭಾಷಣಗಳು ವಿಶಿಷ್ಟ) ನಾನು ಆಗಿನ ಕಾರ್ಯದರ್ಶಿಯಾಗಿ ಕರೆದಾಗ ಈ ಭಾಷಣವನ್ನು ಕೇಳಲು ಮತ್ತು ಕಾರಂತರನ್ನು ಕಾಣಲೆಂದೆ ಹಾಸ್ಟೇಲ್‌ಗೆ ಬಂದ ನಾಮವರ್‌ಜೀಯವರ ಜೆ.ಎನ್.ಯು.ವಿನ ಹಿಂದಿ ವಿಭಾಗದ ಸಹಯೋಗಿ ಮತ್ತು ಸಂಬಂಧಿ ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿ ದಿ. ಪ್ರೊ. ಕೇದಾರನಾಥ ಸಿಂಗ್‌ರವರು ನಮ್ಮನ್ನೆಲ್ಲಾ ಗಲಿಬಿಲಿ ಸಿಲುಕಿಸಿದ್ದು ಮತ್ತು ಅದು ಕೆಲವೇ ಕ್ಷಣಗಳಲ್ಲಿ ಮರೆಯಾದ ಕಾರಣವೆಂದರೆ, ಈ ಎಲ್ಲ ದಿಗ್ಗಜರು (ನಮ್ಮ ಕನ್ನಡದ ಬಿ.ವಿ. ಕಾರಂತರು, ಕೇದಾರಜಿ ಮತ್ತು ನಾಮವರ್‌ಜಿ) ಆ 1950ರ ದಶಕದ ಮೊದಲ ಭಾಗದಲ್ಲಿ ಬಿ.ಎಚ್.ಯು.ವಿನಲ್ಲಿ ಸಹಪಾಠಿಗಳಾಗಿದ್ದವರು. ಜೆ.ಎನ್.ಯು.ವಿನ ಕನ್ನಡದ ಮತ್ತು ಹಿಂದಿಯ ಈ ಸಾಹಿತ್ಯದ ಸೇತುವೆಯಲ್ಲಿ ಜೆ .ಎನ್.ಯು.ವಿನಲ್ಲಿ ಬಿ.ಎಚ್.ಯು.ವಿನಿಂದ ಬಂದ ಹಿಂದಿಯ ಪ್ರಾಧ್ಯಾಪಕರಾಗಿದ್ದ ಕನ್ನಡಿಗ ದಿ. ಪ್ರೊ. ಚಿಂತಾಮಣಿಯವರ (ನಮ್ಮ ಡಾ. ಅಹಲ್ಯಾಚಿಂತಾಮಣಿಯವರ ಪತಿ) ಬಗ್ಗೆ ಇನ್ನೊಮ್ಮೆ ಯಾವಾಗಾದರೂ ಬರೆಯಬೇಕಾದೀತು.



***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಸದಸ್ಯರೇ, ಇದೇ ತಿಂಗಳಿನಲ್ಲಿ 10ನೇ ಮತ್ತು 12ನೇ ತರಗತಿಯ ಮಕ್ಕಳಿಗೆ ಪರೀಕ್ಷೆಗಳು ನಡೆಯಲಿದೆ. ಎಲ್ಲಾ ವಿದ್ಯಾರ್ಥಿಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭಾಶಯಗಳು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಗವು ದೆಹಲಿಗೆ ದಿನಾಂಕ 06.02.2019ರಂದು ಭೇಟಿ ನೀಡಿ ಕೇಂದ್ರ ಸರ್ಕಾರದ ನೇಮಕಾತಿಗಳಲ್ಲಿ ಹಾಗೂ ಬ್ಯಾಂಕ್ ಮತ್ತು ರೈಲ್ವೇ ವಲಯದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸಬೇಕೆಂದು ಮನವಿಯನ್ನು ಸಲ್ಲಿಸಿತು. ಇದಕ್ಕೆ ಸಚಿವ ಶ್ರೀ ಪಿಯೂಶ್ ಗೋಯಲ್ ಒಪ್ಪಿಗೆ ನೀಡಿದರು ಮತ್ತು ಕೇಂದ್ರ ಸಚಿವ ಶ್ರೀ ಪ್ರಕಾಶ್ ಜಾವಡೇಕರ್ ಅವರನ್ನು ಭೇಟಿ ಮಾಡಿ ಈಗಾಗಲೇ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿದೆ, ಅದಕ್ಕೆ ಬಿಡುಗಡೆಯಾಗಬೇಕಾದ ಎಲ್ಲಾ ಸವಲತ್ತುಗಳನ್ನು ನೀಡುವಂತೆ ಆಗ್ರಹಿಸಿದರು. ಇದಕ್ಕೆ ಒಪ್ಪಿಗೆಯನ್ನು ನೀಡಿದರು. ದೆಹಲಿಯ ಕರ್ನಾಟಕ ಭವನದಲ್ಲಿ ದೆಹಲಿಯಲ್ಲಿರುವ ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಬೇಕು ಎಂಬುದು ಮತ್ತು ಈಗಾಗಲೇ ತಾತ್ಕಾಲಿಕ ನೆಲೆಯಲ್ಲಿ 150ಕ್ಕೂ ಹೆಚ್ಚು ಕನ್ನಡೇತರರು ಕೆಲಸ ಮಾಡುತ್ತಿದ್ದು, ಕನ್ನಡಿಗರನ್ನು ಮಾತ್ರ ತೆಗೆದುಕೊಳ್ಳಬೇಕು ಕನ್ನಡಿಗರನ್ನು ಖಾಯಂ ಮಾಡಬೇಕು ಎಂದು ಪ್ರೊ. ಎಸ್.ಜಿ. ಸಿದ್ಧರಾಮಯ್ಯ ನಿಯೋಗ ಕರ್ನಾಟಕ ಭವನದ ನಿವಾಸಿ ಆಯುಕ್ತರಲ್ಲಿ ಆದೇಶ ಮಾಡಿದರು. ಇದಕ್ಕೆ ನಿವಾಸಿ ಆಯುಕ್ತರು ದೆಹಲಿ ಕರ್ನಾಟಕ ಸಂಘವನ್ನು ಸಂಪರ್ಕಿಸಿ ಕನ್ನಡಿಗರನ್ನು ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆ ನೀಡಿದ್ದಾರೆ.

ವೀರಮರಣ ಹೊಂದಿದ ಸಿ.ಆರ್.ಪಿ.ಎಫ್.ನ ಯೋಧರಿಗೆ ದಿನಾಂಕ 30.03.2019ರಂದು 'ನೃತ್ಯನಮನ' ಕಾರ್ಯಕ್ರಮ ಶ್ರೀಮತಿ ನಯನಾ ಭಟ್ ಅವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ದಿನಾಂಕ 31.03.2019ರಂದು ಆಯೋಜನೆ ಮಾಡಲಾಗಿದೆ. ತಾವೆಲ್ಲರೂ ಎರಡೂ ಕಾರ್ಯಕ್ರಮಗಳಿಗೆ ಬಂದು ಯಶಸ್ವಿಗೊಳಿಸಿ.



***ಸಿ.ಎಂ. ನಾಗರಾಜ***
***ಪ್ರಧಾನ ಕಾರ್ಯದರ್ಶಿ***

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**2019 ಮಾರ್ಚ್ 30**
ಶನಿವಾರ
ಸಂಜೆ : 5.00 ಗಂಟೆಗೆ

ಪುಲ್ವಾಮ ಗಡಿಯಲ್ಲಿ ವೀರ ಮರಣ ಹೊಂದಿದ ಸಿ.ಆರ್.ಪಿ.ಎಫ್.ಯೋಧರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ "ನೃತ್ಯ ನಮನ" ಕಾರ್ಯಕ್ರಮ ಆಯೋಜಿಸಲಾಗಿದೆ.

**2019 ಮಾರ್ಚ್ 31**
ಭಾನುವಾರ
ಅಪರಾಹ್ನ : 3.00 ಗಂಟೆಗೆ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸ್ಥಳೀಯ ಮಹಿಳಾ ಸದಸ್ಯರಿಂದ ನೃತ್ಯ ಹಾಗೂ ಸಂಗೀತ ಗಾಯನ ಕಾರ್ಯಕ್ರಮವಿದೆ. ಇದೇ ಸಂದರ್ಭದಲ್ಲಿ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯದ ವಿದ್ಯಾರ್ಥಿಗಳ 'ಸಂಸ್ಕೃತಿ ಸೌರಭ' ತಂಡದಿಂದ ವಿವಿಧ ರಾಜ್ಯಗಳ ನೃತ್ಯ ಕಲಾರೂಪಗಳ ಸಾಂಸ್ಕೃತಿಕ ಕಾರ್ಯಕ್ರಮವಿದೆ.

## ವಿಶೇಷ ಸೂಚನೆ

1. ಪುಲ್ವಾಮ ಗಡಿಯಲ್ಲಿ ವೀರ ಮರಣ ಹೊಂದಿದ ಸಿ.ಆರ್.ಪಿ.ಎಫ್. ಯೋಧರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಸಹಯೋಗದೊಂದಿಗೆ "ನೃತ್ಯ ನಮನ" ಕಾರ್ಯಕ್ರಮ ಆಯೋಜಿಸಲಾಗಿದೆ. ಈ ನಮನ ಕಾರ್ಯಕ್ರಮದಲ್ಲಿ ಸ್ಥಳೀಯ ನುರಿತ ಭರತ ನಾಟ್ಯ ಕಲಾವಿದರು ಕಾರ್ಯಕ್ರಮ ನೀಡಬಹುದು. ಭಾಗವಹಿಸಲು ಇಚ್ಛಿಸುವವರು ಈ ಕಾರ್ಯಕ್ರಮವನ್ನು ಸಂಯೋಜಿಸುತ್ತಿರುವ ಶ್ರೀಮತಿ ನಯನಾ ಭಟ್ ಅವರನ್ನು ಸಂಪರ್ಕಿಸಬಹುದು.
ದೂರವಾಣಿ : 9999133310 /011 26109615

2. ದೆಹಲಿ ಕರ್ನಾಟಕ ಸಂಘವು ಮಹಿಳಾ ದಿನಾಚರಣೆಯ ಅಂಗವಾಗಿ ಎಲ್ಲ ಭಾಷೆಯ ಉತ್ತಮ ಸಾಹಿತ್ಯವಿರುವಂತಹ ನೃತ್ಯ ಹಾಗೂ ಸಂಗೀತ ಗಾಯನ ಕಾರ್ಯಕ್ರಮವನ್ನು ಸಂಘದ ಮಹಿಳಾ ಸದಸ್ಯರಿಂದ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಯಸುವ ತಂಡಗಳು ತಮ್ಮ ಹೆಸರುಗಳನ್ನು ದಿನಾಂಕ 20.03.2019ರ ಒಳಗೆ ನೊಂದಾಯಿಸಬೇಕಾಗಿ ವಿನಂತಿ.
ಸೂಚನೆ : ಸಮೂಹ ಗಾಯನ (ಕನಿಷ್ಠ 4 ಜನರಿರಬೇಕು), ಸಮೂಹ ನೃತ್ಯ (ಕನಿಷ್ಠ 4 ಜನರಿರಬೇಕು), ಸ್ಕಿಟ್–ಮಹಿಳಾ ಆಧಾರಿತವಾಗಿರಬೇಕು.
ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ : ಶ್ರೀಮತಿ ಜಮುನಾ ಸಿ. ಮಠದ–9717146597, ಶ್ರೀಮತಿ ಪೂಜಾ ರಾವ್–9810882498, ಶ್ರೀಮತಿ ಆಶಾಲತಾ ಎಂ.– 9891249149, ಸಂಘದ ಕಛೇರಿ– 26109615, 26104818.

ಪ್ರಧಾನ ಕಾರ್ಯದರ್ಶಿ



# ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರಿಗೆ ನುಡಿನಮನ

ಇತ್ತೀಚೆಗೆ ಲಿಂಗೈಕ್ಯರಾದ ಕರ್ನಾಟಕದ ಶ್ರೇಷ್ಠ ಸಂತ, ತುಮಕೂರಿನ ಸಿದ್ಧಗಂಗಾ ಮಠದ ಪೀಠಾಧಿಪತಿ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರಿಗೆ ದೆಹಲಿ ಕರ್ನಾಟಕ ಸಂಘ ನುಡಿನಮನ ಸಲ್ಲಿಸಿದೆ.

ದಿನಾಂಕ 09.02.2019ರಂದು ಸಂಜೆ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಕನ್ನಡದ ಖ್ಯಾತ ಸಾಹಿತಿ ಶ್ರೀ ಕುಂ. ವೀರಭದ್ರಪ್ಪ ಅವರು ಭಾಗವಹಿಸಿ ಮಾತನಾಡಿದರು. ವಿದ್ಯಾರ್ಥಿ ದೆಸೆಯಲ್ಲಿ ಅವರು ಸಿದ್ಧಗಂಗಾಮಠದಲ್ಲಿ ಕಳೆದ ದಿನಗಳನ್ನು ನೆನೆದರು. ಸ್ವಾಮೀಜಿಗಳ ಶಿಸ್ತು ಮತ್ತು ಅವರ ಸಾಮಾಜಿಕ ಕಳಕಳಿಯನ್ನು ಸ್ಮರಿಸಿದರು. ಒಮ್ಮೆ ಅವರು ತಡವಾಗಿ ಮಠವನ್ನು ಸೇರಿ ಮರುದಿನ ಮುಂಜಾನೆ ಸರಿಯಾದ ಸಮಯಕ್ಕೆ ನಿದ್ದೆಯಿಂದ ಏಳದ ಕಾರಣ ಸ್ವಾಮೀಜಿಗಳಿಂದ ಒದೆ ತಿಂದ ಪ್ರಸಂಗವನ್ನು ವಿವರಿಸಿದ್ದು ಸ್ವಾರಸ್ಯಕರವಾಗಿತ್ತು. ಶಿವಕುಮಾರ ಸ್ವಾಮೀಜಿಯವರು ಶಿಕ್ಷಣಕ್ಕೆ ಸಲ್ಲಿಸಿದ ಕೊಡುಗೆ ಗಣನೀಯ ಮತ್ತು ಸಮಾಜವನ್ನು ಸದಾಕಾಲ ಬೆಳಗಲಿದೆ ಎಂದವರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.

ಹಿರಿಯ ಕನ್ನಡಿಗರಾದ ಡಾ. ಶರದ್ ಜವಳ, ಡಾ. ಅಹಲ್ಯಾಚಿಂತಾಮಣಿ, ಶ್ರೀ ವಿ.ವಿ. ಬಿರಾದಾರ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಆರ್. ರೇಣುಕುಮಾರ್, ಶ್ರೀ ಚೆನ್ನು ಎಸ್. ಮಠದ, ಶ್ರೀ ಎನ್.ಪಿ. ಚಂದ್ರಶೇಖರ, ಶ್ರೀ ಶ್ರೀಕಂಠ ಚೌಕೀಮಠ, ಶ್ರೀ ಸಂತೋಷ್ ಕುಮಾರ್ ಉಪಾಧ್ಯಾಯ, ಶ್ರೀ ನರಸಿಂಹ ಮೂರ್ತಿ ಮೊದಲಾದವರು ಮಾತನಾಡಿ ಸ್ವಾಮೀಜಿಗಳಿಗೆ ಶ್ರದ್ಧಾಪೂರ್ವಕ ನಮನಗಳನ್ನು ಸಲ್ಲಿಸಿದರು.



**ಹಿರಿಯ ಸಾಹಿತಿ ಕುಂ. ವೀರಭದ್ರಪ್ಪ ಅವರು ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿರುವುದು**

# ಮಾತಿಗೆ ಮೀರಿದ ದಿವ್ಯ ವ್ಯಕ್ತಿತ್ವ



ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳು, ತ್ರಿವಿಧ ದಾಸೋಹ ಮೂರ್ತಿಗಳು, ಮಹಾಮಹಿಮರೂ ಆದ ಶ್ರೀ ಶ್ರೀ ಡಾ ಟ. ಶಿವಕುಮಾರ ಮಹಾಸ್ವಾಮಿಗಳ ನಿಲುವುಗಳ ಬಗ್ಗೆ ನಾನು ಮಾತನಾಡ ಬಹುದಾದ ಮಾತುಗಳು ಸೋತು ಶರಣಾಗತವಾಗುತ್ತವೆ. ಮಾತಿಗೆ ಮೀರಿದ ದಿವ್ಯ ವ್ಯಕ್ತಿತ್ವ ಅವರದು.!

"ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ,
ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷ,
ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ,
ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಕ,
ಸೌರಾಷ್ಟ್ರ ಸೋಮೇಶ್ವರ ಲಿಂಗವು ಬೇರಿಲ್ಲ ಕಾಣಿರೋ...."
"ನಿಜವನರಿದ ನಿಶ್ಚಿಂತನೆ,
ಮರಣವ ಗೆಲಿದ ಮಹಂತನೆ,
ಪರವನೊಳಗೊಂಡ ಪರಿಣಾಮಿಯೆ,
ಬಯಲಲೊದಗಿದ ಭರಿತನೆ, ಗುಹೇಶ್ವರ ಲಿಂಗ ನಿರಾಳವಿನೊಳಗೊಂಡ ಸಹಜನೆ"

ಇಂಥ ಅದ್ಭುತ ಪರಿಕಲ್ಪನೆಯ ವಚನಗಳಿಗೆ ನೈಜ ನಿದರ್ಶನವಾಗಿ ಇಂದು ಯಾರಾದರೂ ತೊಳಗಿ ಬೆಳಗಿದ್ದರ ಉದಾಹರಣೆ ಇದ್ದರೆ ಅದು ನಿಶ್ಚಯವಾಗಿ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳೆಂದರೆ ಅದು ಅತಿಶಯೋಕ್ತಿವೇನಲ್ಲ. 111 ವರ್ಷಗಳ ತ್ರಿವಿಧ ತಪದ, ತ್ರಿವಿಧ ದಾಸೋಹಗಳ, ತ್ರಿವಿಧ ಲಿಂಗಾರ್ಚನೆಯ ಸಿದ್ಧಿ ಶ್ರೀ ಸಿದ್ದಗಂಗಾ ಶ್ರೀ ಯಾಗಿ ವಿರಾಜಿಸಿದ ಮಹಾನ್ ವಿಭೂತಿ ಪುರುಷರನ್ನು ಕಣ್ಣಾರೆ ಕಂಡ ಭಾಗ್ಯ ನಮ್ಮದು.

ಕತ್ತಲೆ ಗಾಢವಾದಂತೆ ಜ್ಯೋತಿಯ ಕಾಂತಿ ಹೆಚ್ಚುವಂತೆ, ಸುತ್ತಲೂ ಕತ್ತಲೆಯಿದ್ದಾಗಲೂ ಕೂಡಾ ಪೂಜ್ಯರ ಪ್ರಭೆ ನಮ್ಮ ಜೊತೆ ಚಿರಂತರ ಮತ್ತು ನಿತ್ಯನೂತನ!!! ನನ್ನ ಮಾತುಗಳ ಆರಂಭದಲ್ಲಿ ದಿವ್ಯ ವ್ಯಕ್ತಿತ್ವದ ಕುರಿತು ಬಳಸಿದ ವಚನದ ಒಂದು ಸಾಲಿಗೆ ಪೂಜ್ಯರ ಜೀವನದಲ್ಲಿ ನಡೆದ ಒಂದು ದೃಷ್ಟಾಂತವನ್ನು ಉದಾಹರಿಸುತ್ತೇನೆ.

"ಚಿತ್ತದಲ್ಲಿ ನಿರಪೇಕ್ಷ"....ಪೂಜ್ಯರು ಸಿದ್ದಗಂಗಾ ಮಠದ ಉತ್ತರಾಧಿಕಾರಿಗಳಾದ ಹೊಸತರಲ್ಲಿ, ಮಠಕ್ಕೆ ಆರ್ಥಿಕ ಸ್ಥಿತಿ ಉತ್ತಮವಾಗಿರಲಿಲ್ಲ. ದಾಸೋಹ ಕಾರ್ಯಗಳು, ವಿದ್ಯಾರ್ಥಿ ನಿಲಯಗಳು ನಿರ್ಬಾಧಿತವಾಗಿ ನೆಡೆಯುತ್ತಿದ್ದರೂ ಪೂಜ್ಯರಿಗೆ ಹಣಕಾಸಿನ ವಿಚಾರದಲ್ಲಿ ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದರು. ಒಂದು ಸಲ ಪರಿಸ್ಥಿತಿ ಕೈ ಮೀರಿದಾಗ ಗುರುಗಳಾದ ಶ್ರೀ ಉದ್ದಾನ ಶಿವಯೋಗಿಗಳ ಬಳಿ ಕೇಳಿದಾಗ ಗುರುಗಳು "ದುಡಿದು ಸಂಪಾದಿಸಿ ಖರ್ಚು ಮಾಡಿಕೊಳ್ಳಲು" ಆದೇಶಿಸಿದರು.

ಪೂಜ್ಯರು ಎದೆಗುಂದಲಿಲ್ಲ ಗುರುಗಳ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಿದರು. ದಾಸೋಹದ ಒಲೆಗೆ ಅವಶ್ಯಕತೆ ಇದ್ದ ಸೌದೆಗಳಿಗಾಗಿ ಶಿವಕುಮಾರ ಸ್ವಾಮಿಗಳು ಕೊಡಲಿಯನ್ನು ಕೈಯಲ್ಲಿ ಹಿಡಿದರು ಆ ಸಂಧರ್ಭದಲ್ಲಿ ನಡೆದ ಆ ಪ್ರಸಂಗ ಮಠದ ಅಭ್ಯುದಯದಲ್ಲಿ ಮಹತ್ತರವಾದ ಪಾತ್ರವಹಿಸಿತು!!.

ಚೇಳೂರಿನ ಓರ್ವ ಮುದುಕ ಅತ್ಯಂತ ಕೃಪಣ. ಜೀವನದಲ್ಲಿ ಯಾರಿಗೂ ಒಂದು ಚಿಕ್ಕಾಸನ್ನೂ ಕೊಟ್ಟುಗೊತ್ತಿಲ್ಲದವ. ಆ ದಿನ ಮಠಕ್ಕೆ ಬಂದು ಉದ್ದಾನ ಶಿವಯೋಗಿಗಳ ಹತ್ತಿರಕ್ಕೆ ಏಳುನೂರು ರೂಪಾಯಿಗಳ ನೋಟುಗಳನ್ನು ತಂದು ಪೂಜ್ಯರ ಮುಂದಿಟ್ಟ. "ಸ್ವಾಮಿ ಈ ನೋಟುಗಳೆಲ್ಲ ಹುಳು ತಿಂದು ಹಾಳಾಗಿ ಹೋಗಿವೆ, ಕಳ್ಳಕಾಕರ ಭಯದಿಂದ ಹೊಟ್ಟಿನ ಬಣವೆಯಲ್ಲಿ ಮುಚ್ಚಿಟ್ಟಿದ್ದೆ, ಅಲ್ಲಿ ಇಟ್ಟಿದ್ದರಿಂದ ಹೀಗಾಗಿವೆ: ಯಾರೂ ಹಿಡಿಯುತ್ತಿಲ್ಲ. ಇವಕ್ಕೆ ಹೊಸ ನೋಟುಗಳನ್ನು ನಿಮ್ಮ ಚಿಕ್ಕ ಸ್ವಾಮಿಗಳಿಗೆ ಹೇಳಿ ತರಿಸಿಕೊಡಿ, ಅವರು ಬುದ್ಧಿವಂತರಂತೆ" ಎಂದ. ಉದ್ದಾನ ಶಿವಯೋಗಿಗಳು ಅವನ್ನೊಮ್ಮೆ ನೋಡಿ ಅವನಿಗೆ ಪ್ರಸಾದ ಮಾಡಿಸಿ, ಅಲ್ಲಿಯೇ ಸೌದೆ ಕಡಿಯುತ್ತಿದ್ದ ಶಿವಕುಮಾರ ಸ್ವಾಮಿಗಳನ್ನು ಕರೆದು "ಈ ದುಡ್ಡು ರೈತನದು, ಹುಳು ತಿಂದು ಹಾಳಾಗಿದೆ ಇವಕ್ಕೆ ಹೊಸ ನೋಟು ತರಿಸಿಕೊಡಿರಿ" ಎಂದು ಆದೇಶಿಸಿದರು. ಸಿದ್ದಗಂಗಾ ಮಠದಿಂದ ತುಮಕೂರಿಗೆ ಆಗಿನ್ನೂ ವಾಹನಗಳಿರಲಿಲ್ಲ, ಸ್ವತಃ ಶಿವಕುಮಾರ ಸ್ವಾಮಿಗಳು ಕಾಲ್ನಡಿಗೆಯಿಂದ ತುಮಕೂರಿಗೆ ತೆರಳಿ ಹೊಸ ನೋಟುಗಳನ್ನು, ತಂದು ಆ ಮುದುಕನಿಗೆಕೊಟ್ಟರು. ಮುದುಕ ಆ ನೋಟುಗಳನ್ನು ಕೈಗೆ ಎತ್ತಿ ಕೊಳ್ಳಲು ಇಚ್ಚಿಸಲೇ ಇಲ್ಲ. ಅತ್ಯಂತ ಕೃಪಣನಾದ ಅವನಲ್ಲಿ ಈ ಪರಿವರ್ತನೆ ಹೇಗಾಯಿತು ಎನ್ನುವದು ಊಹೆಗೂ ನಿಲುಕದು.

ಪೂಜ್ಯರ ನಿರಪೇಕ್ಷ ಸೇವೆ ಆ ಮುದುಕನಲ್ಲಿ ತ್ಯಾಗಮನೋಭಾವದ ಮಣಿ ದೀಪ ಹೊತ್ತಿಸಲು ಸಾಕು. ಆತನು "ಸ್ವಾಮಿ ಈ ಹಣವನ್ನು ನಾನೇನು ಮಾಡಲಿ, ನೀವೇ ಇಟ್ಟುಕೊಂಡುಬಿಡಿ" ಎಂದು ಹೇಳಿ ಹೊರಟುಹೋದ. ಈ ಮುದುಕನ ಹೆಸರು, ಚಿಕ್ಕಣ್ಣ ಅಥವಾ ಚಿಕ್ಕೆಗೌಡ.

ಚಿಕ್ಕಣ್ಣನ ಈ ಹಣವೇ ಆ ಕಾಲದಲ್ಲಿ ಶಿವಕುಮಾರ ಸ್ವಾಮಿಗಳಿಗೆ ಮೂಲ ಬಂಡವಾಳವಾಯಿತು ಅರವತ್ತು ವಿದ್ಯಾರ್ಥಿಗಳ ನಿಲಯ ವರ್ಷಕ್ಕೆ ಒಂಬತ್ತು ಸಾವಿರ ವಿದ್ಯಾರ್ಥಿಗಳ ನಿಲಯವಾಯಿತು. ನೂರಾರು ವಿದ್ಯಾಸಂಸ್ಥೆಗಳ ಹುಟ್ಟಿಗೆ ಕಾರಣವಾಯಿತು ಪೂಜ್ಯರ ಚಿತ್ತದ ನಿರಪೇಕ್ಷತೆ–ಬಹುಶಃ ಅವರ ನೂರ ಹನ್ನೊಂದು ವರ್ಷಗಳ ಭೌತಿಕ ಶರೀರ ನಮ್ಮಿಂದ ಕಣ್ಮರೆಯಾದರೂ, ಅವರನ್ನು ಎಂದೂ ಮರೆಯಲಾಗದ ಚಿರಂಜೀವಿಗಳಾಗಿಸಿದೆ. ಮತ್ತೆ ನನ್ನ ಮಾತುಗಳು ಸೋತು ಶರಣಾಗುತ್ತವೆ. ಮಾತಿಗೆ ಮೀರಿದ ದಿವ್ಯ ವ್ಯಕ್ತಿತ್ವ ಅವರದು.......



*ಶ್ರೀಕಂಠ ಚೌಕೀಮಠ*
*ನವದೆಹಲಿ*

(ಗ್ರಂಥ ಋಣ : ಶ್ರೀ ಸಿದ್ದಯ್ಯ ಪುರಾಣಿಕ ಅವರ ಲೇಖನ ಮತ್ತು "ಸಿದ್ದಗಂಗಾ ಶ್ರೀ")

# ಪುರುಷೋತ್ತಮ ಬಿಳಿಮಲೆ ಅವರಿಗೆ 'ಸಾಹಿತ್ಯಶ್ರೀ' ಪ್ರಶಸ್ತಿ



ಕಳೆದ ಎರಡು ದಶಕಗಳಿಂದ ದೆಹಲಿಯಲ್ಲಿರುವ ಹಿರಿಯ ಸಾಹಿತಿ, ಜನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು 2018ನೇ ಸಾಲಿನ 'ಸಾಹಿತ್ಯಶ್ರೀ' ಗೌರವ ಪ್ರಶಸ್ತಿಯನ್ನು ಘೋಷಿಸಿದೆ. ಪ್ರಶಸ್ತಿಯೊಂದಿಗೆ ರೂ. 25,000/- ನಗದು ಬಹುಮಾನವೂ ಒಳಗೊಂಡಿದೆ. ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರೂ ಆಗಿರುವ ಡಾ. ಬಿಳಿಮಲೆ ಪ್ರಸ್ತುತ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರು.

ಕೂಡುಕಟ್ಟು, ಶಿಷ್ಟ ಪರಿಶಿಷ್ಟ, ದಲಿತ ಬಂಡಾಯ ಸಾಹಿತ್ಯ, ಕರಾವಳಿ ಜನಪದ ಮೊದಲಾದುವು ಡಾ. ಬಿಳಿಮಲೆಯವರ ಪ್ರಮುಖ ಕೃತಿಗಳು. ಹಲವು ಸಂಪಾದಿತ ಕೃತಿಗಳೂ ಸೇರಿದಂತೆ ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಲ್ಲಿಕಾರ್ಜುನ ಮನ್ಸೂರ ಪ್ರಶಸ್ತಿ, ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ, ಅರೆಭಾಷೆ ಸಾಂಸ್ಕೃತಿಕ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳಿಗೆ ಅವರು ಪಾತ್ರರಾಗಿದ್ದಾರೆ. ಡಾ. ಪುರುಷೋತ್ತಮ ಬಿಳಿಮಲೆಯವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.



# 'ಕನ್ನಡ ಸಾಹಿತ್ಯವನ್ನು ವಿಶ್ವಕ್ಕೆ ಪರಿಚಯಿಸಿದ ಕೆಲಸ'

## ಡಾ. ಬಿಳಿಮಲೆ ಅಭಿನಂದನಾ ಕಾರ್ಯಕ್ರಮದಲ್ಲಿ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ

ದೆಹಲಿಯ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿ ಡಾ. ಪುರುಷೋತ್ತಮ ಬಿಳಿಮಲೆಯವರು ಕನ್ನಡ ಸಾಹಿತ್ಯವನ್ನು ವಿಶ್ವಕ್ಕೆ ಪರಿಚಯಿಸುವ ಕೆಲಸ ಮಾಡುತ್ತಿದ್ದಾರೆ. ಕನ್ನಡದ ಮಹತ್ವದ ಕೃತಿಗಳಾದ ಕವಿರಾಜಮಾರ್ಗ ಮತ್ತು ಇದೀಗ ರನ್ನನ ಗದಾಯುದ್ಧವನ್ನು ಇಂಗ್ಲೀಷ್ ಭಾಷೆಗೆ ತರುವುದರ ಮೂಲಕ ಅವರು ಜಾಗತಿಕ ಮಟ್ಟದಲ್ಲಿ ಕನ್ನಡದ ಬೆಳವಣಿಗೆಗೆ ಬಹುಕಾಲ ನೆನಪಲ್ಲಿ ಉಳಿಯುವ ಕೆಲಸ ಮಾಡಿದ್ದಾರೆ ಎಂದು ಇತಿಹಾಸಕಾರ ಹಿರಿಯ ವಿದ್ವಾಂಶ, ಗಮಕ ಕಲಾವಿದ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಶ್ಲಾಘಿಸಿದ್ದಾರೆ.

ಡಾ. ಪುರುಷೋತ್ತಮ ಬಿಳಿಮಲೆಯವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಸಾಹಿತ್ಯಶ್ರೀ' ಗೌರವ ಪ್ರಶಸ್ತಿ ಬಂದ ಹಿನ್ನೆಲೆಯಲ್ಲಿ ದಿನಾಂಕ 15.02.2019ರಂದು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ಅಭಿನಂದನೆ ಮತ್ತು ಹಿರಿಯ ಕಲಾವಿದರೊಂದಿಗೆ ಒಂದು ಸಂಜೆ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಬಿಳಿಮಲೆಯವರು ಕೂಡುಕಟ್ಟು, ಕರಾವಳಿ ಜನಪದ ಮೊದಲಾದ ಮಹತ್ವದ ಕೃತಿಗಳನ್ನು ನೀಡುವುದರ ಜೊತೆಗೆ ಅಮೆರಿಕಾದ ಭಾರತೀಯ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಕನ್ನಡೇತರರಿಗೆ ಕನ್ನಡ ಕಲಿಸಿದ ಕೆಲಸವು ಗಮನಾರ್ಹ ಎಂದು ಅಭಿನಂದಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮಾತನಾಡಿ, ಡಾ. ಪುರುಷೋತ್ತಮ ಬಿಳಿಮಲೆಯವರು ಸಾಹಿತಿಯಾಗಿ ಮಾತ್ರವಲ್ಲ ಸಂಘಟಕರಾಗಿಯೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಕನ್ನಡ ಕಟ್ಟುವ ಕೆಲಸಕ್ಕೆ ಅವಿಸ್ಮರಣೀಯ ಸೇವೆ ಸಲ್ಲಿಸಿದ್ದಾರೆ ಎಂದು ಅಭಿನಂದಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ. ಪುರುಷೋತ್ತಮ ಬಿಳಿಮಲೆಯವರು ಹೊರನಾಡ ಕನ್ನಡಿಗನಾಗಿ ಅಕಾಡೆಮಿಯ ಪ್ರಶಸ್ತಿ ಸ್ವೀಕರಿಸುವುದು ಒಂದು ವಿಶೇಷ ಅನುಭವ ಮತ್ತು ಈ ಅಭಿನಂದನೆಗೆ ಸಂಘಕ್ಕೆ ಕೃತಜ್ಞನಾಗಿದ್ದೇನೆ ಎಂದರು. ಅವರು ಮಂಗಳೂರು ಮತ್ತು ಹಂಪಿ ವಿಶ್ವವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸಿದ ದಿನಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿದರು. ಸಾಹಿತ್ಯದ ವಿದ್ಯಾರ್ಥಿಗಳು ಸಾಹಿತ್ಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಪ್ರದರ್ಶನ ಕಲೆಗಳನ್ನು ನೋಡುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು ಎಂಬ ಇಂಗಿತವನ್ನು ಡಾ. ಬಿಳಿಮಲೆ ವ್ಯಕ್ತಪಡಿಸಿದರು.

ಹಿರಿಯ ಯಕ್ಷಗಾನ ಕಲಾವಿದ ಶಿವಾನಂದ ಹೆಗಡೆ ಅವರು ಡಾ. ಬಿಳಿಮಲೆ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಾ ದೆಹಲಿ ಕರ್ನಾಟಕ ಸಂಘದೊಂದಿಗಿನ ತಮ್ಮ ಒಡನಾಟವನ್ನು ಸ್ಮರಿಸಿಕೊಂಡರು.

ಉಪಾಧ್ಯಕ್ಷ ಡಾ. ವೈ. ಅವನೀಂದ್ರನಾಥ್ ರಾವ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದಿಸಿದರು.

*ಡಾ. ಅವನೀಂದ್ರನಾಥ್ ರಾವ್*



**ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ಮಾತನಾಡುತ್ತಿರುವುದು. ಹಿರಿಯ ವಿದ್ವಾಂಸ ಡಾ. ಆರ್.ವಿ. ಎಸ್. ಸುಂದರಂ ಅವರನ್ನು ಕಾಣಬಹುದು**

# ಪುರುಷೋತ್ತಮ ಬಿಳಿಮಲೆ ಯಾಕೆ ಮುಖ್ಯ?

ಗೆಳೆಯ ಬಿಳಿಮಲೆಯವರಿಗೆ ಸಂದ ಗೌರವ ಆಹ್ಲಾದಕಾರಿ. ನಮ್ಮ ಸಂದರ್ಭದಲ್ಲಿ ಎರಡು ಮೂರು ಕಾರಣಕ್ಕಾಗಿ ಬಿಳಿಮಲೆ ಮುಖ್ಯ. ತನ್ನ ಶೈಕ್ಷಣಿಕ ಜವಾಬ್ದಾರಿಯ ಸಾಧ್ಯತೆ ಮತ್ತು ವಿಸ್ತಾರಗಳನ್ನು ಸದಾ ಪ್ರಜ್ಞೆಯಲ್ಲಿಟ್ಟುಕೊಂಡು ಕೆಲಸ ಮಾಡುವ ಬಗೆ. ಎರಡನೆಯದು ನಾಡಿನೆಲ್ಲೆಲ್ಲೋ ನಡೆಯುವ ಇರುವ ಸಾಂಸ್ಕೃತಿಕ ಚಹರೆಗಳ ಧ್ಯಾನ. ಮೂರನೆಯದು ನಮ್ಮ ಕಾಲದ ವೈಪರೀತ್ಯಗಳಿಗೆ ಭಯವಿಲ್ಲದೇ ಉತ್ಕಟವಾಗಿ ಪ್ರತಿಕ್ರಿಯಿಸುವ ಬಗೆ ಇವು ಮೂರು ಬೇರೆಯವರಲ್ಲಿ ಇಲ್ಲವೆಂದಲ್ಲ. ಬಿಳಿಮಲೆ ಇದಕ್ಕೆ ಮತ್ತೆ ಹೊಳಪು ತಂದುಕೊಟ್ಟಿದ್ದಾರೆ. ಅವರಿರುವ ಜಾಗಕ್ಕೂ ಅಂಥಾ ಒಂದು ಮಾಂತ್ರಿಕ ಶಕ್ತಿ ಇದೆ; ಅದು ಬೇರೆ ಮಾತು.! ಕರ್ನಾಟಕದ ಯಾವುದೋ ವಿವಿಯ ದಿಕ್ಸೂಚಿ ಭಾಷಣದಲ್ಲಿ ಅವರು ಸಂಶೋಧನಾ ಮಟ್ಟದ ಬಗ್ಗೆ; ಅದಕ್ಕಿರಬೇಕಾದ ಶಿಸ್ತಿನ ಬಗ್ಗೆ ಓದಿದ ಪ್ರಬಂಧ ಕಳೆದೊಂದು ದಶಕದಲ್ಲಿ ನಾನು ಓದಿದ ಮುಖ್ಯ ಪ್ರತಿಕ್ರಿಯೆ. ವಿಮರ್ಶೆ ಮತ್ತು ಮಾರ್ಗದರ್ಶನ ಇವೆರಡೂ ಗುರುವೊಬ್ಬನ ಮೂಲಧಾತು.

ನಮ್ಮ ವಿವಿಗಳ ಸಂಶೋಧನಾ ಗುಣಮಟ್ಟವನ್ನು ಬಲ್ಲವರಿಗೆ ಈ ಕುಸಿತ ಅಂಡಿನ ಕುರದ ಹಾಗೆ ಬಾಧಿಸುತ್ತಿರುವುದು ನಾನು ಬಲ್ಲೆ. ಆದರೆ ಹೆಚ್ಚಿನವರು ಪ್ರವಾಹದ ವಿರುದ್ಧ ನಿಲ್ಲುವ ಗಟ್ಟಿ ಬಂಡೆಯಾಗುವ ಕುರುಹು ತೋರಿಲ್ಲ. ಹೊರನಾಡಿಗೆ ಹೋದಾಗ ನಮ್ಮ ಇರವಿನ ಚೌಕಟ್ಟು, ಅದರ ಮಟ್ಟ, ಅನ್ಯ-ತನ್ನ ಸಂಬಂಧ ಎಲ್ಲವೂ ನಿಚ್ಚಳವಾಗುತ್ತದೆ. ಅಲ್ಲಿ ತನ್ನನ್ನು ಸಾಬೀತುಪಡಿಸುವುದೆಂದರೆ ತನ್ನ ನೆಲದ ಪ್ರತಿಭೆಯನ್ನು ಸಾಬೀತುಪಡಿಸುವುದೇ ಆಗಿದೆ. ಆದ್ದರಿಂದಲೇ ಪ್ರಾತಿನಿಧಿಕತೆ ಎಲ್ಲಾ ಮನುಜರಿಗೆ ಅದಲ್ಲೂ ಸೃಜನಶೀಲರಿಗೆ ಬೆನ್ನಿಗಂಟಿದ ಭೇತಾಳ.

ಬಿಳಿಮಲೆ ಇದನ್ನೆಲ್ಲಾ ನಿಭಾಯಿಸಿದ ಬಗೆ ಅಪೂರ್ವ. ಒಂದು ವಿಭಾಗವನ್ನು ಕಣ್ಣು ಸೆಳೆಯುವಂತೆ ಕಟ್ಟುವುದು ಹೇಗೆ ಎಂಬುದನ್ನು ಅವರು ತೋರಿಸಿ ಕೊಟ್ಟಿದ್ದಾರೆ. ಬೌದ್ಧಿಕವಾಗಿ ಕನ್ನಡದ ಹೊಸ ತಲೆಮಾರಿನ ಶೋಧಕ/ಸಂಶೋಧಕ ಮತಿಗೆ ಸಾಣೆ ಹಿಡಿಯುವ ರೂಪಕವಾಗಿದ್ದಾರೆ.

ಖಾಸಗಿಯಾಗಿ, 'ಮಾರಾಯ, ನಾನು ಮತ್ತು ನನ್ನ ಹುದ್ದೆ ಎರಡಕ್ಕೂ ಗ್ಯಾರಂಟಿ ಇಲ್ಲ' ಎಂದು ನಗಿಸುತ್ತಾ ಕೆಲಸ ಮಾಡುವುದು ನೋಡಿದರೆ ಪಾಪಪ್ರಜ್ಞೆ ಕಾಡುತ್ತದೆ. ಕರ್ನಾಟಕದ ಎಲ್ಲಾ ನಾಯಕರಲ್ಲೂ ನಿರ್ಭಿಡೆಯಿಂದ ಆತ್ಮ ಸಾಕ್ಷಿಗೆ ಹೊಳೆದ ಪ್ರಶ್ನೆಗಳನ್ನು ಅವರು ಕೇಳಿದ್ದು ನನಗೆ ಗೊತ್ತು. ಸಾರ್ವಜನಿಕ ಬುದ್ಧಿಜೀವಿ ಇರಬೇಕಾದ ಮಾದರಿ ಅದು.

> "ನಾನು ಪಿಯು ಓದುವಾಗ ಬಿಳಿಮಲೆ ವಿವೇಕಾನಂದ ಕಾಲೇಜಿನ ವಿದ್ಯಾರ್ಥಿ. ಬಿಳಿಮಲೆ ಸಿ.ಎನ್ ರಾಮಚಂದ್ರ (ಉತ್ತಮ ಕತೆಗಾರನಾಗಿದ್ದ ಸಿಎನ್. ಸಿಗಬೇಕಾದ ಮಾನ್ಯತೆ ದೊರೆಯದೇ ಗತಿಸಿದ.) ಮತ್ತು ಕಲಾವಿದ ಮನೋಹರ ಆಚಾರ್ಯ ಆಗ ವಿವೇಕಾನಂದದ ಪ್ರತಿಭಾ ಮಣಿಗಳು. ಉದ್ಯೋಗ ದೊರೆತ ಮೇಲೆ ಕಳೆದುಹೊದ ಪ್ರತಿಭೆಗಳಿವೆ. ಆದರೆ ಪುಣ್ಯಾವಾಶಾತ್ ಬಿಳಿಮಲೆ ವಿಸ್ತಾರವಾಗಿ ಹರಡಿಕೊಂಡರು."

ನಾನು ಪಿಯು ಓದುವಾಗ ಬಿಳಿಮಲೆ ವಿವೇಕಾನಂದ ಕಾಲೇಜಿನ ವಿದ್ಯಾರ್ಥಿ. ಬಿಳಿಮಲೆ ಸಿ.ಎನ್ ರಾಮಚಂದ್ರ (ಉತ್ತಮ ಕತೆಗಾರನಾಗಿದ್ದ ಸಿಎನ್. ಸಿಗಬೇಕಾದ ಮಾನ್ಯತೆ ದೊರೆಯದೇ ಗತಿಸಿದ.) ಮತ್ತು ಕಲಾವಿದ ಮನೋಹರ ಆಚಾರ್ಯ ಆಗ ವಿವೇಕಾನಂದದ ಪ್ರತಿಭಾ ಮಣಿಗಳು. ಉದ್ಯೋಗ ದೊರೆತ ಮೇಲೆ ಕಳೆದುಹೊದ ಪ್ರತಿಭೆಗಳಿವೆ. ಆದರೆ ಪುಣ್ಯಾವಾಶಾತ್ ಬಿಳಿಮಲೆ ವಿಸ್ತಾರವಾಗಿ ಹರಡಿಕೊಂಡರು.


ನಮ್ಮ ಸಂದರ್ಭದಲ್ಲಿ ರಹಮತ್, ಮಟ್ಟು ಮತ್ತು ಬಿಳಿಮಲೆ ಸದ್ಯದ ಸ್ಟಾರ್ಗಳು ಅಂತ ನಾನು ಹೇಳುವುದಿದೆ. ಇದು ಪೋಜುಗಾರದ ಮಾತಲ್ಲ. ಒಂದು ತಲೆಮಾರನ್ನು ಬೌದ್ಧಿಕ ಶಿಸ್ತಿನ ರಿಗರ್ಗೆ ಹಚ್ಚಿದವರು ಇವರು.

ಹೊಸ ತಲೆಮಾರಿಗೆ ಮಾದರಿ ಮತ್ತು ಮಾರ್ಗದರ್ಶಿ ಎರಡೂ ಆಗುವುದು ಕಷ್ಟ. ಕನ್ನಡದ ಪುಣ್ಯವೆಂದರೆ ಅಂಥವರು ಸಾಕಷ್ಟಿದ್ದಾರೆ. ಸದ್ಯದ ತುರ್ತಿನಲ್ಲಿ ಓದು ಬರಹದ ಧ್ಯಾನವೇ ಸಾಮಾಜಿಕ ಜವಾಬ್ದಾರಿಯ ಕೆಲವು ತುರ್ತಿನ ಕೆಲಸಗಳಿಗೆ ತೊಡಕಾಗುವ ಪಾಪಪ್ರಜ್ಞೆಯ ದಿನಗಳಲ್ಲಿ ನಾವಿದ್ದೇವೆ.

ಎಲ್ಲಾ ಹೋರಾಟದ ಮಧ್ಯೆಯೂ ಬೌದ್ಧಿಕ ಅನ್ವೇಷಣೆ ಮುಖ್ಯ. ಬಿಳಿಮಲೆ ಅಂಥಾ ತೋರು ಬೆರಳು. ನಾನು ಹೊರಾಟದ ಉಲ್ಲಾಸ ಕಿಚ್ಚು ತುಂಬಿಕೊಂಡ ಯುವಕರಿರುವ ಕರ್ನಾಟಕದ ಕೆಲವು ಚಳವಳಿಗಳಲ್ಲಿ ಅಷ್ಟಿಷ್ಟು ಸೇರಿಕೊಂಡಾಗ ಹೇಳುವುದಿದೆ. 'ನೋಡ್ರಪ್ಪಾ, ಪ್ರತೀ ಸೈನ್ಯದ ಜೊತೆ ಕಮ್ಮಾರನೊಬ್ಬ ಇರುತ್ತಿದ್ದ. ಅವನ ಕೆಲಸ ಹೋರಾಡುವುದಲ್ಲ, ಹೋರಾಡುವವರ ಕತ್ತಿ ಮೊಂಡಾಗಿರುತ್ತಲ್ಲ, ಅದನ್ನು ಹರಿತ ಮಾಡಿಕೊಡುವುದು. ನನ್ನಂಥವರ ಕೆಲಸ ಅದು' ಅಂತ. ಕಾಲ ಬೇಡುವ ಶುಲ್ಕ ಅದು. ದೇಹ ನೀಡುವ ಕಾಯಕ ಅದು. ಬಿಳಿಮಲೆಯಂಥಾ ಸಹಪಥಿಕರಿರುವಾಗ ಸಾಂಸ್ಕೃತಿಕ, ಸಾಹಿತ್ಯಿಕ ದುಡಿಮೆಯೂ ಸಾಹಸದ ಉಲ್ಲಾಸ ನೀಡುತ್ತದೆ.

***ಸುರೇಶ ಕಂಜರ್ಪಣೆ***

*(ಲೇಖಕರು ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ತಜ್ಞರಾಗಿದ್ದು ಡಾ. ಪುರುಷೋತ್ತಮ ಬಿಳಿಮಲೆಯವರಿಗೆ ಸಾಹಿತ್ಯಶ್ರೀ ಪ್ರಶಸ್ತಿ ಬಂದ ಹಿನ್ನೆಲೆಯಲ್ಲಿ ತಮ್ಮ ನೆನಪುಗಳನ್ನು ಇಲ್ಲಿ ತೆರೆದಿಟ್ಟಿದ್ದಾರೆ.)*



**ಡಾ. ಪುರುಷೋತ್ತಮ ಬಿಳಿಮಲೆ ಅವರೊಂದಿಗೆ ಸುರೇಶ್ ಕಂಜರ್ಪಣೆ**

# ಬಿಳಿಮಲೆಯವರ ಸಾಹಿತ್ಯಶ್ರೀ ನೆಪದಲ್ಲಿ



ತಾಳಮದ್ದಳೆ ಕಾರ್ಯಕ್ರಮವೊಂದರಲ್ಲಿ ಅರ್ಥಧಾರಿಯಾಗಿ ಡಾ. ಪುರುಷೋತ್ತಮ ಬಿಳಿಮಲೆ

ಈ ಶತಮಾನದ ಮೊದಲನೆಯ ದಶಕದಲ್ಲಿ ಅಮೆರಿಕಾದಲ್ಲಿದ್ದಾಗ ನನ್ನ ಕನ್ನಡ ತಬ್ಬಲಿತನವನ್ನು ತುಂಬಿಕೊಳ್ಳಲು ಹಲವಾರು ಕನ್ನಡ ಸಂಘಗಳಿಗೆ ಸದಸ್ಯೆಯಾಗಿದ್ದೆ. ಅವುಗಳು ಬರೀ ಹಬ್ಬ ಹುಣ್ಣಿಮೆ, ಹೋಮ ಹವನಗಳ ದಂಧೆಯನ್ನು ನಡೆಸುವುದನ್ನು ಕಂಡು ನಿರಾಸೆಯಿಂದ ಸುಮ್ಮನಾಗಿದ್ದೆ.

ಯಾಕೋ ಒಂದು ದಿನ ಸುಮ್ಮನೆ ಇಂಡಿಯಾದಲ್ಲೇ ಇರುವ ಕನ್ನಡ ಸಂಘ ಹೇಗಿರುತ್ತದೆ ಎಂದು ಕುತೂಹಲಕ್ಕೆ ದೆಹಲಿ ಕರ್ನಾಟಕ ಸಂಘದ ಸದಸ್ಯೆಯಾದೆ. ಅದರಲ್ಲಿ ಕಾಣಿಸಿಕೊಳ್ಳುತ್ತಿದ್ದುದೆಲ್ಲವೂ ಹಿತವಾಗಿತ್ತು ಎಂದು ಹೇಳಲಾರೆ. ಆದರೆ ಪುರುಷೋತ್ತಮ ಬಿಳಿಮಲೆಯವರ 'ದಿನಕ್ಕೊಂದು ಪದ್ಯ' ಮಾತ್ರ ನನ್ನ ಗಮನವನ್ನು ಸೆಳೆದಿತ್ತು. ಓದಿದ ಪದ್ಯಗಳೇ ಇರಬಹುದು. ಆದರೆ ಒಂದು ಚರಣವನ್ನು ಮಾತ್ರ ಓದಿದಾಗ ಆಗುವ ಅನುಭವವೇ ಬೇರೆ. ಇಡಿ ಮುಖದ ಸೌಂದರ್ಯ ಒಂದು ರೀತಿಯದಾಗಿರಬಹುದು. ಬರೀ ಕಣ್ಣುಗಳನ್ನು ಮಾತ್ರ ಸೆರೆ ಹಿಡಿದರೆ? ನಳಿನಿ ದೇಶಪಾಂಡೆ(?)ಯ 'ತುಂಟ ಹುಡುಗನ ಸೊಂಟ ಸುತ್ತಿ... ಲ್ಯಾಂಬ್ರೆಟಾ ವೆಸ್ಪಾ ಬೆನ್ನನು ಹತ್ತಿ... ನರಕಕ್ಕಾದರೂ ಹೋದೇನು!' ಸಾಲುಗಳು ದಿನವಿಡೀ ಮನಸ್ಸನ್ನು ಉಲ್ಲಾಸದಲ್ಲಿಟ್ಟಿದ್ದವು. ಸಿದ್ದಲಿಂಗಯ್ಯನವರ

'ನಿನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು
ಕಪ್ಪು ಮುಖ, ಬೆಳ್ಳಗಡ್ಡ ಉರಿಯುತ್ತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನು ಒದ್ದರು.....
ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು'

ಸಾಲುಗಳಂತೂ ಎಲ್ಲೋ ಹೇಗೋ ಕಳೆದುಕೊಂಡಿದ್ದ ಜೀವಹುರುಪನ್ನು ಹಿಂತಿರುಗಿ ಕೊಟ್ಟಿದ್ದವು.

ಬಿಳಿಮಲೆಯವರು ಹಾಕುತ್ತಿದ್ದ ಪದ್ಯದ ಕೆಲವೇ ಸಾಲುಗಳಿಗೆ ದೂರದಲ್ಲೆಲ್ಲೋ ಕಾಯುತ್ತಿದ್ದೆ ಎನ್ನುವುದು ಅವರಿಗೂ ಗೊತ್ತಿಲ್ಲವೋ ಏನೋ.

ಪುರುಷೋತ್ತಮ ಬಿಳಿಮಲೆಯವರು ಮುಂಚೆ ಹಂಪಿಯಲ್ಲಿದ್ದರು ಎನ್ನುವುದು ಗೊತ್ತಿತ್ತು. ಜಾನಪದ ಸಂಶೋಧನೆಯಲ್ಲಿ ಪರಿಚಿತ ಹೆಸರು ಎನ್ನುವುದೂ ಗೊತ್ತಿತ್ತು. ಹೆಸರುಗಳ ಜೊತೆ ಏನೇನೋ ತಳುಕು ಹಾಕಿಕೊಂಡಿರುತ್ತವಲ್ಲ? ಬಾಲ್ಯದಲ್ಲಿ ಪುರುಷೋತ್ತಮ ಎಂದರೆ ಕರುಣಾಳು ರಾಮನ ಮುಖ ಕಣ್ಣೆದುರಿಗೆ ಬರುತ್ತಿತ್ತು. ನಂತರ ಆರೆಸ್ಸೆಸ್-ಬಿಜೆಪಿ-ಬಜರಂಗಿ-ಎಬಿವಿಪಿಗಳು ಆ ಸೀತಾರಾಮನನ್ನು ಉಗ್ರ-ವ್ಯಗ್ರ ಬಿಲ್ಲುಧಾರಿ ಶ್ರೀರಾಮನನ್ನಾಗಿ ಮಾಡಿದಾಗ ಅವ ಪುರುಷೋತ್ತಮನಾಗಿ ಉಳಿಯುವುದು ಸಾಧ್ಯವಿರಲಿಲ್ಲ. ಕೊನೆಗೆ ಹದಿಹರೆಯದಲ್ಲಿ ಓದಿದ್ದ 'ಪುರುಷೋತ್ತಮನ ಸಾಹಸಗಳು' ಮಾಲಿಕೆಯ ಭಾರತೀಯ ಶೆರ್ಲಾಕ್ ಹೋಮ್ಸ್ ಸಹ ಬುದ್ಧಿಮತ್ತೆಯನ್ನು ಬರೀ ಪುರುಷಗುಣವಾಗಿಸುವುದರಿಂದ ಆ ಹೆಸರೇ ಯಾಕೋ ಹಾಸ್ಯಾಸ್ಪದವೆನ್ನಿಸಿತ್ತು.

ಜಾನಪದ ಸಂಶೋಧನೆಯಿಂದ ಮತ್ತು ದಿನಕ್ಕೊಂದು ಪದ್ಯಗಳಿಂದ ಆಪ್ತರೆನ್ನಿಸಿದ ಬಿಳಿಮಲೆಯವರನ್ನು ನನ್ನ ತಲೆಯಲ್ಲಿ ಬರೀ ಬಿಳಿಮಲೆಯಾಗಿಯೇ ಉಳಿಸಿಕೊಂಡೆ.

2011ರಲ್ಲಿ ಎಂಥದ್ದೋ ಒಂದು ಕೋರ್ಸ್ ಮಾಡಿದರೇನೇ ನಿನಗೆ ಬಡ್ತಿ ಅಂತ ಸರಕಾರ ಬೆದರಿಸಿದ್ದರಿಂದ ಸರಿ, ಹೋಗುವುದೇ ಆದರೆ ಜೆ.ಎನ್.ಯು.ಗೆ ಯಾಕೆ ಹೋಗಬಾರದು ಎಂದು ತಲೆ ಲೆಕ್ಕ ಹಾಕಿತು. ದಶಕದ ಹಿಂದೆ ಎಮ್.ಫಿಲ್‌ಗೆ ಜೆ.ಎನ್.ಯು.ವಿನಲ್ಲಿ ಪ್ರವೇಶ ಸಿಕ್ಕಿದ್ದರೂ ಸಹ ಹತ್ತಿರ ಎಂದು ಹೈದರಾಬಾದನ್ನೇ ಆರಿಸಿಕೊಂಡಿದ್ದೆನಲ್ಲ? ಆದರೂ ಜೆ.ಎನ್.ಯು 'road not taken' ತರಹ ಕಾಡುತ್ತಲೇ ಇತ್ತು. ಸರಿ ಜೈ ಜೆಯೆನ್ನು ಎಂದು ದೆಹಲಿಯ ಹಾದಿ ಹಿಡಿದಿದ್ದಾಯ್ತು.

ಜೆ.ಎನ್.ಯು.ವಿನಲ್ಲಿ ಕಳೆದ ಒಂದು ತಿಂಗಳು ಈ ದಶಕದ 'ಗಂಧರ್ವ ಕ್ಷಣಗಳು' ಎಂದರೆ ಅತಿ ಎಂದುಕೊಳ್ಳಬಾರದು. ಒಳ್ಳೆಯ ಊಟ, ಸುತ್ತ ಹಸಿರು, ಭದ್ರತೆ, ಸದಾ ತೆರೆದಿರುವ ಲೈಬ್ರರಿ, ದಿನಕ್ಕೆ ನಾಲ್ಕು ಮಂದಿ ನಿಜವಾದ ಅರ್ಥದಲ್ಲಿ ವಿದ್ವಾಂಸರೆನಿಸಿದವರ ಉಪನ್ಯಾಸಗಳು, ಅಲ್ಲಿಯತನಕ ಬದುಕಿನಲ್ಲಿ ಒಂದು ತಿಂಗಳ ದೀರ್ಘದಷ್ಟು ಆಳವಾಗಿ ಖುಷಿಯಾಗಿದ್ದರ ಅನುಭವವೇ ನನಗಿರಲಿಲ್ಲ. ಒಂದು ದಿನ ಅಲ್ಲಿಯ ಡೈರೆಕ್ಟರುಗಳ (ರಾಕೇಶ್ ಬಾಟಬ್ಯಾಲ್-ರವಿ) ಜೊತೆ ಚಹಾ ನೆಪದಲ್ಲಿ ಹರಟೆ ಹೊಡೆಯುತ್ತಿದ್ದಾಗ 'ಮುಂದಿನ ವಾರ ನಿಮ್ಮ ಕನ್ನಡ ದೇಶದಿಂದ ಬಂದಿರುವ ಪ್ರೊಫೆಸರರ ಲೆಕ್ಚರ್ ಇದೆ' ಎಂದಾಗ ನನ್ನ ಕುತೂಹಲ ಕಣ್ಣಿಗೆ ಕಾಣುವಂತೆಯೇ ಇತ್ತು.

ಯಾವ ಪುರುಷ ಠೇಂಕಾರವೂ ಇಲ್ಲದ ಪುರುಷೋತ್ತಮ ಬಿಳಿಮಲೆಯವರನ್ನು ನೋಡಿದಾಗ ಕನ್ನಡ ಬಾಂಧವ್ಯವನ್ನೂ ಮೀರಿ ಆಪ್ತರೆನ್ನಿಸಿದ್ದರು. 'ಕುಮಾರ ರಾಮ' ಉಪನ್ಯಾಸವನ್ನು ತನ್ಮಯಳಾಗಿ ಕೇಳಿಸಿಕೊಂಡಿದ್ದೆ. ಉಪನ್ಯಾಸ ಮುಗಿದ ಮೇಲೆ ನಾನು ಕುಳಿತಲ್ಲಿಗೆ ಬಂದು ನಿಂತು 'ನಮ್ಮ ಕರ್ನಾಟಕ ಸಂಘಕ್ಕೆ ಒಮ್ಮೆ ಬನ್ನಿ' ಎಂದು ಕರೆದಾಗ ಯಾವಾಗ, ಎಲ್ಲಿ, ಇತ್ಯಾದಿ ವಿಚಾರಿಸಿಕೊಂಡಿದ್ದೆ. ಎರಡು ನಿಮಿಷಗಳ ನಂತರ ಥಟ್ಟನೆ, 'ಅರೆ! ನನ್ನ ಮೇಜಿನ ಹತ್ತಿರ ಅವರು ನಿಂತು ಆಮಂತ್ರಣ ಕೊಡುತ್ತಿದ್ದಾರೆ, ನಾನು ಕೂತುಕೊಂಡೇ ಮಾತಾಡುತ್ತಿದ್ದೇನಲ್ಲ, ಇದೆಂತ ಠೇಂಕಾರ!' ಎಂದು ಅರಿವಾಗಿ ಗಡಬಡಿಸಿ ಎದ್ದು ನಿಂತಿದ್ದೆ. ಬಿಳಿಮಲೆಯವರು ಆ ಉದ್ಧಟತನವನ್ನು ಗಮನಿಸಿರದಿದ್ದರೆ ಅದು ಅವರ ದೊಡ್ಡತನ ಮಾತ್ರ.

ಕರ್ನಾಟಕ ಸಂಘಕ್ಕೆ ಹೋಗುವ ದಿನ ಬಿಳಿಮಲೆಯವರೇ ಜೆ.ಎನ್.ಯು.ಗೆ ಬಂದು ಕಾರಿನಲ್ಲಿ ಕರೆದೊಯ್ದಿದ್ದರು. ಅಲ್ಲಿ ನಾನು ಮಂಡಿಸಿದ 'ಹೆಣ್ಣಿನ ಆತ್ಮಚರಿತ್ರೆಗಳು' ಪೇಪರನ್ನು ಮೆಚ್ಚಿ ಎಲ್ಲರೆದುರಿಗೆ ಬಿಚ್ಚು ಮನಸ್ಸಿನಿಂದ ಹೊಗಳಿದ್ದರು. ನಂತರ ವಿಜಯ ಕರ್ನಾಟಕದಲ್ಲಿ ಅಂಕಣವನ್ನು ಬರೆಯಲು ಆಹ್ವಾನವನ್ನೂ ನೀಡಿದ್ದರು.

ಇನ್ನೊಮ್ಮೆ 'ಕನ್ನಡ ಕಲಿಯೋಣ' ಕಾರ್ಯಕ್ರಮ ಉದ್ಘಾಟನೆ ಮಾಡಿದಾಗಲೂ ಹೋಗಿದ್ದೆ. ಆಶಯ, ಭಾಷಣ ಇತ್ಯಾದಿಗಳೆಲ್ಲಾ ಮುಗಿದು ದೊಡ್ಡ ವ್ಯಕ್ತಿಗಳು ಹೊರಟ ಮೇಲೆ ಮಕ್ಕಳಿಗೆ ಬಿಳಿಮಲೆಯವರದ್ದೇ ಮೊದಲನೆಯ ಕ್ಲಾಸು! ಅವರ ಮುಖದ ಮೇಲಿನ ಸಡಗರ, ಉಲ್ಲಾಸ, ಮಕ್ಕಳ ಜೊತೆ ಮಗುವಾಗಿ ಸೇರಿಹೋಗಿದ್ದ ತನ್ಮಯತೆಯನ್ನು ನೋಡಿ ಇನ್ನಿಲ್ಲದಷ್ಟು ಬೆರಗಾಗಿತ್ತು. 'Radical Innocence' ಎಂದರೆ ಹೀಗೇ ಇರಬಹುದೇ ಅಂತ ಅನ್ನಿಸಿತ್ತು.

ನಂತರ ದೆಹಲಿಯಲ್ಲಿ ಏನೇ ಕೆಲಸವಿದ್ದರೂ ಬಿಳಿಮಲೆಯವರ ಮೊರೆ ಹೋಗುವುದು ಅಭ್ಯಾಸವಾಗಿ ದೆಹಲಿ ಇರುವುದು ಬಿಳಿಮಲೆಯಲ್ಲಿಯೇ ಅಂತನ್ನಿಸುವಷ್ಟು ದೆಹಲಿ ಕರ್ನಾಟಕಕ್ಕೆ ಬಂತು!

ಬಿಳಿಮಲೆಯವರಿಗೆ ಸಲ್ಲಿರುವ ಪ್ರಶಸ್ತಿ ಸಾಹಿತ್ಯ ಮತ್ತು ಅಕಾಡೆಮಿ ಎರಡೂ ತಮಗೇ ಕೊಟ್ಟುಕೊಂಡಿರುವ ಗೌರವ ಅಂತಲೇ ಅನ್ನಿಸುತ್ತದೆ. ಅಭಿನಂದನೆಗಳು ಪ್ರೊಫೆಸರ್ ಬಿಳಿಮಲೆ!



**ಡಾ. ಸುಕನ್ಯಾ ಕನರಳ್ಳಿ**
(ಲೇಖಕಿ ಗಿರೀಶ್ ಕಾಸರವಳ್ಳಿ ಅವರ ಚಲನಚಿತ್ರಗಳ ಕುರಿತು ಸಂಶೋಧನೆ ನಡೆಸಿದ್ದಾರೆ ಮತ್ತು ಸ್ತ್ರೀವಾದಿ ಚಿಂತನೆಗಳಿಗೆ ಹೆಸರಾಗಿದ್ದಾರೆ. ಜೆ.ಎನ್.ಯು.ವಿನಿಂದ ಪಿ.ಎಚ್.ಡಿ. ಪಡೆದಿದ್ದಾರೆ)

# ಹುಟ್ಟು ಹೋರಾಟಗಾರ ಜಾರ್ಜ್ ಫರ್ನಾಂಡೀಸ್ ನೆನಪು



ಕಾಲ ಅಥವಾ ವಯಸ್ಸು ಎಂಥವರನ್ನೂ ಬದಲಾಯಿಸುತ್ತೆ, ಮಾಗಿಸುತ್ತದೆ ಅದರಲ್ಲೂ ರಾಜಕೀಯದಲ್ಲಿ ತತ್ವ, ಸಿದ್ಧಾಂತ ಮತ್ತು ಧ್ಯೇಯ ಇವೆಲ್ಲವೂಗಳನ್ನು ತಮ್ಮ ಅಸ್ತಿತ್ವ ಉಳಿಸಿಕೊಳ್ಳಬೇಕಾದರೆ ಮೂಲೆಗುಂಪು ಮಾಡಿಯೇ ಮುಂದೆ ಹೋಗುತ್ತಾರೆ. ಆದರೆ ಕೆಲವೇ ಕೆಲವು ಅಪ್ಪಟ ಹೋರಾಟಗಾರರು ಮಾತ್ರ ಅದೇ ಕಿಚ್ಚು, ಅದೇ ಹೋರಾಟದ ಮನೋಭಾವದಲ್ಲೇ ಇರುತ್ತಾರೆ ಈಗ ನಾನು ಹೇಳುತ್ತಿರುವುದು ಸಹ ಅದೇ ಕಿಚ್ಚಿನ ಕಿಡಿ ಮೊನ್ನೆಯಷ್ಟೇ ನಮ್ಮನ್ನಗಲಿದ ಶ್ರೀ ಜಾರ್ಜ್ ಫರ್ನಾಂಡಿಸ್ ಅವರ ಬಗ್ಗೆ, ಕೆಲವು ವ್ಯಕ್ತಿಗಳೇ ಹಾಗೆ ಜಾತಿ, ಧರ್ಮ, ರಾಜ್ಯ ಮತ್ತು ಭಾಷೆಗಳ ವ್ಯಾಪ್ತಿ ಮೀರಿ ಬೆಳೆಯುತ್ತಾರೆ ಅನ್ನೋದಕ್ಕೆ ಜಾರ್ಜ್ ಅವರಿಗಿಂತ ಬೇರೆ ಉದಾಹರಣೆ ಇಲ್ಲ. ಮಂಗಳೂರಲ್ಲಿ ಹುಟ್ಟಿ ಆಗಿನ ಕಾಲದಲ್ಲೇ ಮುಂಬೈ ಸೇರಿ ಜೋಪಡಿ ಕಲ್ಲಿನ ಮೇಲೆ ಮಲಗಿ ಅಸಂಘಟಿತ ಟ್ಯಾಕ್ಸಿ ಚಾಲಕರ, ಹೋಟೆಲ್ ಕಾರ್ಮಿಕರ ಪರ ಹೋರಾಡಿ ಕಾರ್ಮಿಕ ನಾಯಕನಾಗಿ ಬೆಳೆದು 1967ರಲ್ಲಿ ಅಂದಿನ ಕಾಂಗ್ರೆಸ್ ದಿಗ್ಗಜ ಎಸ್.ಕೆ. ಪಾಟೀಲ್ ವಿರುದ್ಧ ಸಂಸತ್ ಚುನಾವಣೆಗೆ ನಿಂತಾಗ ಇದು ಯಾವುದೋ ಹರಕೆಯ ಕುರಿ ಎಂದು ಜಾರ್ಜ್ ಅವರನ್ನು ನೋಡಿ ನಕ್ಕವರೇ ಜಾಸ್ತಿ. ಆದರೆ ಫಲಿತಾಂಶ ಬಂದಾಗ ಶಾಕ್ ನೀಡಿತ್ತು ಜಾರ್ಜ್ ಗೆಲುವು.

ಜಾರ್ಜ್ ಅವರ ಮತ್ತೊಂದು ಮರೆಯಲಾರದ ಕೊಡುಗೆ ಇದೆ, ಅದೇನೆಂದರೆ 1967ರಲ್ಲಿ ಪಟೇಲರು ಸಂಸತ್ತಿನಲ್ಲಿ ಕನ್ನಡದಲ್ಲಿ ಮಾತನಾಡಲು ವಿರೋಧ ವ್ಯಕ್ತವಾದಾಗ ಜಾರ್ಜ್ ಫರ್ನಾಂಡಿಸ್ ಅವರು ಎದ್ದು ನಿಂತು "ನಾನು ಪಟೇಲರು ಮಾತನಾಡಿದ್ದನ್ನು ಇಂಗ್ಲಿಷ್‌ಗೆ ಅನುವಾದ ಮಾಡುತ್ತೇನೆ, ನೀವು ಅವರಿಗೆ ತಮ್ಮ ಮಾತೃಭಾಷೆಯಲ್ಲಿ ಮಾತನಾಡಲು ಅನುಮತಿ ನೀಡಿ ಎಂದು ಜೆ.ಎಚ್. ಪಟೇಲರ ಪರ ನಿಂತು ಕನ್ನಡದಲ್ಲಿ ಮಾತನಾಡಿ ಇತಿಹಾಸ ಸೃಷ್ಟಿ ಆಗುವಂತೆ ಮಾಡಿದ ಕರ್ನಾಟಕದ ಹೆಮ್ಮೆಯ ಕುಡಿ ಇದೇ ನಮ್ಮ ಜಾರ್ಜ್ ಫರ್ನಾಂಡಿಸ್ ಅವರು.

ಭಾರತೀಯ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ರೇಲ್ವೆ ನೌಕರರ ಪರವಾಗಿ ಇಡೀ ದೇಶದಲ್ಲಿ ಬರೋಬ್ಬರಿ 20 ದಿನಗಳ ಕಾಲ ರೈಲ್ವೇ ಸಂಚಾರವನ್ನೇ ಸ್ಥಗಿತಗೊಳಿಸಿ ತಮ್ಮ ಅಪಾರ ಸಾಮರ್ಥ್ಯ ಸಾಬೀತು ಮಾಡಿ ಆಗಲೇ ಪಾಕಿಸ್ತಾನವನ್ನು ಬಗ್ಗು ಬಡಿದು ಭಾರತದೆದುರು ಮಂಡಿಯೂರುವಂತೆ ಮಾಡಿದ್ದ ಇಂದಿರಾಗಾಂಧಿಯೇ ಬೆಚ್ಚಿಬೀಳುವಂತೆ ಮಾಡಿದ್ದು ಇದೇ ನಮ್ಮ ಕರಾವಳಿಯ ಜಾರ್ಜ್ ಫರ್ನಾಂಡಿಸ್!! ತುರ್ತುಪರಿಸ್ಥಿತಿಯ ಅವಧಿಯಲ್ಲಿ ಸುಮಾರು ಒಂದೂವರೆ ವರ್ಷಗಳ ಕಾಲ ಸರ್ದಾರರಂತೆ ವೇಷಧರಿಸಿ ಅಂದಿನ ಇಂದಿರಾ ಸರ್ಕಾರ ಸೋಲುವಂತೆ ಮಾಡಿದ್ದರು. ಕೊನೆಗೆ 1977ರಲ್ಲಿ ಜೈಲಲ್ಲಿದ್ದೇ ಬರೋಬ್ಬರಿ 3 ಲಕ್ಷ ಮತಗಳ ಅಂತರದಿಂದ ಬಿಹಾರದ ಮುಜಾಫರ್‌ಪುರ್‌ನಲ್ಲಿ ಗೆದ್ದಿದ್ದರು.

ಕೊನೆ ಉಸಿರಿರೋವರೆಗೂ ಕಾಂಗ್ರೆಸ್ ವಿರೋಧಿಸಿ ಅಂತರಕಾಯ್ದುಕೊಂಡು (ಹಾಗೆಂದು ಬಿಜೆಪಿಯನ್ನೂ ಸೇರಲಿಲ್ಲ) ಕರ್ನಾಟಕಕ್ಕೆ ಸಂಬಂಧವೇ ಇರದ ದೂರದ ಬಿಹಾರದ ಜನರ ಮನ ಗೆದ್ದು 5 ಬಾರಿ ಸಂಸದರಾಗಿ (ಒಟ್ಟು 9 ಬಾರಿ) ಆಯ್ಕೆಯಾಗಿ ಪ್ರಧಾನಿ ಹುದ್ದೆಯೊಂದನ್ನು ಬಿಟ್ಟು ಪ್ರಮುಖ ಖಾತೆಗಳನ್ನು ನಿಭಾಯಿಸಿದರು. ಕೈಗಾರಿಕಾ ಮಂತ್ರಿಯಾಗಿ ಕೋಕ ಕೋಲ ಕಂಪನಿಯನ್ನು 15 ವರ್ಷ ಭಾರತದ ಹೊರಗಿಟ್ಟಿದ್ದರು, ರೇಲ್ವೆ ಮಂತ್ರಿಯಾಗಿ ಕ್ಲಿಷ್ಟಕರ ಕೊಂಕಣ ಮಾರ್ಗ ಕಲ್ಪಿಸಿದ್ದು, ರಕ್ಷಣಾ ಸಚಿವರಾಗಿ ಶ್ರೀ ವಾಜಪೇಯಿ ಸರ್ಕಾರದಲ್ಲಿ ಕಾರ್ಗಿಲ್ ಯುದ್ಧ ಗೆದ್ದಿದ್ದು, ರಾಜಸ್ತಾನದ ಪೊಕ್ರಾನ್‌ನಲ್ಲಿ 1998ರಲ್ಲಿ ಯಶಸ್ವಿಯಾಗಿ ಅಣುಪರೀಕ್ಷೆ ನಡೆಸಿ ಭಾರತದ ಗತ್ತು ಗೈರತ್ತನ್ನು ವಿಶ್ವಕ್ಕೇ ಸಾರಿದ್ದು, 18 ಬಾರಿ ಸಿಯಾಚಿನ್ ಅಂತಾ ದುರ್ಗಮ ಸ್ಥಳಗಳಿಗೆ ಭೇಟಿ ನೀಡಿ ಸೈನಿಕರಿಗೆ ನಾನಿರುವೆ ನಿಮ್ಮೊಂದಿಗೆ ಎಂದು ಅವರ ಡೇರೆಯೊಳಗೆ ಮಲಗಿ ಧೈರ್ಯ ಸ್ಥೈರ್ಯ ತುಂಬಿದ ಸೇನಾನಿ ಇದೇ ಜಾರ್ಜ್ ಅವರು!!!


ಜಾರ್ಜ್ ಅವರಿಗೆ ಕನ್ನಡ, ತುಳು, ಕೊಂಕಣಿ, ತಮಿಳು, ಮಲಯಾಳಂ, ಇಂಗ್ಲೀಷ್, ಹಿಂದಿ, ಲ್ಯಾಟಿನ್, ಮರಾಠಿ ಸೇರಿದಂತೆ ಹತ್ತಕ್ಕೂ ಹೆಚ್ಚು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡೋ ಕಲೆ ಸಿದ್ಧಿಸಿತ್ತು. ಹಲವು ಪ್ರಮುಖ ಹುದ್ದೆಗಳನ್ನು ನಿಭಾಯಿಸಿದ್ದರೂ ಸಹ ಸ್ವಂತಕ್ಕೆ ಒಂದು ಕಾರು, ಮನೆ, ಆಸ್ತಿ ಏನನ್ನೂ ಹೊಂದದೇ ಬದುಕಿದ್ದ ಅತಿ ಸರಳ ಜೀವಿ. 2003ರಲ್ಲಿ ಮಂಗಳೂರಿಗೆ ಕೇಂದ್ರ ರಕ್ಷಣಾ ಸಚಿವರಾಗಿ ಬಂದಿದ್ದ ಕಾಲದಲ್ಲಿ ಅವರು ಧರಿಸಿದ್ದ ಬಟ್ಟೆಗಳನ್ನು ಅವರೇ ಖುದ್ದು ತೊಳೆಯುತ್ತಿದ್ದನ್ನು ಕಂಡು ಅವರೊಂದಿಗೆ ತೆರಳಿದ್ದ ಅಧಿಕಾರಿಗಳೇ ಬೆರಗಾಗಿದ್ದರಂತೆ!!! ವಿಮಾನ ಪ್ರಯಾಣದಲ್ಲೂ ಜಾರ್ಜ್ ಯಾವಾಗಲೂ ಎಕನಾಮಿ ಕ್ಲಾಸ್‌ನಲ್ಲೇ ಹೋಗುತ್ತಿದ್ದರು. ಅದೆಷ್ಟೋ ಬಾರಿ ದೆಹಲಿಯ ಕೃಷ್ಣ ಮೆನನ್ ಮಾರ್ಗದ ಮನೆಯಿಂದ ಸಂಸತ್ತಿಗೆ ನಡೆದೇ ಹೋಗುತ್ತಿದ್ದ ಉದಾಹರಣೆಗಳಿವೆ. ಇನ್ನೊಂದು ವಿಶೇಷವೆಂದರೆ ಜನಸಾಮಾನ್ಯರಿಗೆ ಸುಲಭವಾಗಿ ಸಂಪರ್ಕ ಸಾಧಿಸಲು ಅವರ ದೆಹಲಿ ನಿವಾಸದ ಗೇಟ್ ಅನ್ನು ಸಹ ತೆಗೆಸಿದ್ದರು ಎಂದರೆ ನೀವೇ ಊಹಿಸಿ ಅವರ ಸಾಮಾನ್ಯ ಬದುಕನ್ನು. 2009ರಲ್ಲಿ ಯಾವುದೋ ಕಾರಣಕ್ಕೆ ದೆಹಲಿಯಲ್ಲಿ ಸಚಿವ ಶ್ರೀ ಅನಂತ್ ಕುಮಾರ್ ಅವರ ನಿವಾಸಕ್ಕೆ ಬಂದಿದ್ದ ಜಾರ್ಜ್ ಊಟ ಮುಗಿಸಿ ನೆರೆದಿದ್ದ ಪತ್ರಕರ್ತರೊಂದಿಗೆ ಸ್ವಲ್ಪ ಹೊತ್ತು ಮಾತಾಡಿ ಆಚೆ ಬಂದು 3 ಕಿ.ಮಿ ದೂರದಲ್ಲಿದ್ದ ಮನೆಗೆ ರಾತ್ರಿ 11ಗಂಟೆಯಲ್ಲಿ ಸರಸರ ಹೆಜ್ಜೆಹಾಕಿ ಒಬ್ಬರೇ ಹೋದಾಗ ಇವರಾ ಜಾರ್ಜ್ ಫರ್ನಾಂಡಿಸ್ ಅಂತ ಅಲ್ಲಿದ್ದವರಿಗೆ ಅನ್ನಿಸಿದ್ದು ಸುಳ್ಳಲ್ಲ. ಸ್ಥಳೀಯ ಜನಪ್ರತಿನಿಧಿಗಳು, ಶಾಸಕರೇ, ಗತ್ತು, ದರ್ಪ, ದವಲತ್ತು ತೋರಿಸೋ ಈಗಿನ ಕಾಲದಲ್ಲಿ ಅಷ್ಟೊಂದು ದೊಡ್ಡ ದೊಡ್ಡ ಹುದ್ದೆ ಅಲಂಕರಿಸಿ ಹುದ್ದೆಗಳಿಗೇ ಘನತೆ ತಂದ ವ್ಯಕ್ತಿ ವಾಸಿಸುತ್ತಿದ್ದು ತೀರಾ ಸಣ್ಣ ಮನೆಯೊಂದರಲ್ಲಿ ಅದೂ ಸಹ ಯಾವುದೇ ಸಹಾಯಕರು ಇಲ್ಲದೇ. 2009ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಹಾರದ ಮುಜಾಫರ್‌ಪುರ್‌ನಿಂದ ಸ್ಪರ್ಧಿಸಲು ಹಠಹಿಡಿದಾಗ ಅವರ ಪಟ್ಟದ ಶಿಷ್ಯ ಈಗಿನ ಸೀ.ಎಂ. ನಿತೀಶ್ ಕುಮಾರ್ ರಾಜ್ಯಸಭೆಗೆ ಕಳುಹಿಸುತ್ತೇವೆ ಲೋಕಸಭೆಗೆ ಬೇಡವೆಂದರೂ ಸಮಾಜವಾದಿಗಳ್ಯಾರು ರಾಜ್ಯಸಭೆಗೆ ಹೋಗಲ್ಲವೆಂದು ಗದರಿಸಿ ಕೊನೆಗೆ ಪಕ್ಷೇತರವಾಗಿ ಸ್ಪರ್ಧಿಸಿ ಸೋಲುಕಂಡರು. ಆಮೇಲೆ ರಾಜ್ಯಸಭೆಗೆ ಆಯ್ಕೆಯಾಗಿ ಹೋದರೂ ಕೂಡಾ ಅಷ್ಟರಲ್ಲಾಗಲೇ ವಯೋಸಹಜ ಖಾಯಿಲೆ ಅದರಲ್ಲೂ ಮರೆವು ಹುಟ್ಟು ಹೋರಾಟಗಾರನನ್ನು ಹಣ್ಣು ಮಾಡಿತ್ತು. 2010ರಲ್ಲಿ ಕನ್ನಡದ ಖ್ಯಾತ ಪತ್ರಕರ್ತರೊಬ್ಬರು ದೆಹಲಿಯ ನಿವಾಸಕ್ಕೆ ಉಭಯಕುಶಲೋಪರಿ ವಿಚಾರಿಸಲು ಹೋದಾಗ ಮಂಚದಮೇಲೆ ಒಂದು ಮಗ್ಗುಲಲ್ಲಿ ಜಾರ್ಜ್ ಮಲಗಿದ್ದರೆ ಅದೇ ಮಂಚದ ಇನ್ನೊಂದು ತುದಿಯಲ್ಲಿ ಅವರ ಸಾಕು ನಾಯಿ ಮಲಗಿತ್ತಂತೆ ಅಲ್ಲಲ್ಲಿ ಪುಸ್ತಕಗಳ ರಾಶಿ, ಒಂದಷ್ಟು ಡೈರಿಗಳು, ನಾಲ್ಕೈದು ಜೊತೆ ಖಾದಿ ಜುಬ್ಬಗಳು, ಅಲ್ಲೇ ಮೇಜಿನ ಮೇಲೆ ಒಂದೆರಡು ದಪ್ಪ ಗಾಜಿನ ಕನ್ನಡಕಗಳು... ಇಷ್ಟೇ ಅವರ ಕೊನೆಗಾಲದಲ್ಲಿದ್ದ ಆಸ್ತಿ. ಕಡೆಗೆ ಮನೆಯಲೊಂದು ಟೀವಿಯೂ ಇರಲಿಲ್ಲ, ಇರೋ ಬಿಳಿಕೂದಲು ಉದುರುತ್ತಿದೆ ಅಂತ ಇನ್ನು ಬಾಚಣಿಗೆ ಯಾಕೆ ಬೇಕು ಅಂತ ತಮಾಷೆಯಾಗಿ ಹೇಳಿ 4ರೂಪಾಯಿಯ ಬಾಚಣಿಗೆಯನ್ನೂ ಬಿಟ್ಟ ವ್ಯಕ್ತಿಗೆ ಶವಪೆಟ್ಟಿಗೆ ಹಗರಣ ಮಾಡಿ 4 ಕೋಟಿ ಹಣ ತಿಂದಿದ್ದೀಯ ಅಂತ ಆರೋಪ ಮಾಡಿ ರಕ್ಷಣಾ ಖಾತೆಯಿಂದ ಕೆಳಗಿಳಿಸಿದಾಗ ಆ ಜೀವ ಅದೆಷ್ಟು ನೋವು ಉಂಡಿತ್ತೋ.... ಮತ್ತೆ 3 ತಿಂಗಳಲ್ಲಿ ನಿರಪರಾಧಿ ಅಂತ ತೀರ್ಪು ಕೂಡಾ ಹೊರಬಿತ್ತು.

ಕಳೆದ ಆರೇಳು ವರ್ಷಗಳಿಂದ ಅಲ್ಜಿಮರ್ ಖಾಯಿಲೆಯಿಂದ ನೆನಪಿನಶಕ್ತಿ ಕಳೆದುಕೊಂಡು ಹಾಸಿಗೆ ಹಿಡಿದಿದ್ದ ಜೀವ ಮಾನಸೀಕವಾಗಿ ಅದೆಷ್ಟು ನರಳಿತ್ತೋ.. ವಿಷಾದವೆಂದರೆ ಅವರನ್ನು ಖ್ಯಾತಿಗೊಳಿಸಿದ ಟ್ರೇಡ್ ಯೂನಿಯನ್‌ಗಳ ಅಬ್ಬರ ಹಿಂದಿನಂತಿಲ್ಲ, ಕಾರ್ಮಿಕ ಹೋರಾಟದ ಕಿಚ್ಚು ಆರಿದೆ... ಇದೀಗ ಭವ್ಯಭಾರತದ ಕನಸು ಕಂಡ ಎ.ಪಿ.ಜೆ. ಕಲಾಂ, ವಾಜಪೇಯೀ ನಂತರ ಜಾರ್ಜ್ ಫರ್ನಾಂಡಿಸ್ ಎಂಬ ನಂದಾದೀಪವೂ ಆರಿದೆ. ಹುಟ್ಟು ಹೋರಾಟಗಾರನ, ದೇಶಭಕ್ತನ ಮತ್ತು ಸಾಧಕನ ಅಧಮ್ಯ ವಿಶ್ವಾಸದ ಆತ್ಮಕ್ಕೆ ಶಾಂತಿ ಸಿಗಲಿ.



*ಗಜಾನನ ಶರ್ಮ*

# ರನ್ನನ ಗದಾಯುದ್ಧಂ ಕೃತಿಯ ಇಂಗ್ಲೀಷ್ ಅನುವಾದ ಬಿಡುಗಡೆ



**ಡಾ. ವೆಂಕಟಾಚಲ ಹೆಗಡೆ 'ರನ್ನನ ಗದಾಯುದ್ಧಂ' ಇಂಗ್ಲೀಷ್ ಅನುವಾದ ಕೃತಿಯನ್ನು ಬಿಡುಗಡೆಗೊಳಿಸಿದರು. ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ, ಡಾ. ಆರ್.ವಿ.ಎಸ್. ಸುಂದರಂ ಮತ್ತು ಕು. ಅಮ್ಮೆಲ್ ಶೆರೋನ್ ಅವರನ್ನು ಕಾಣಬಹುದು.**

ಜವಾಹರ್ ಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಗೊಂಡಂದಿನಿಂದ ಕನ್ನಡ ಸಾಹಿತ್ಯ-ಸಂಸ್ಕೃತಿ ಪರಂಪರೆಯನ್ನು ಸಂವಾದ, ಉಪನ್ಯಾಸ, ವಿಚಾರ ಸಂಕಿರಣಗಳ ಮೂಲಕ ಕನ್ನಡ ಮತ್ತು ಕನ್ನಡೇತರ ತಲೆಮಾರಿಗೆ ತಲುಪಿಸುವ ರಾಷ್ಟ್ರಮಟ್ಟದ ಪರ್ಯಾಯ ಕಾರ್ಯಕ್ರಮಗಳನ್ನು ಮಾಡುತ್ತ ಬಂದಿದೆ. ಕಳೆದ ವರ್ಷವಷ್ಟೇ ಕನ್ನಡ ಪೀಠ ಕನ್ನಡ ಭಾಷೆಯಲ್ಲಿ ಉಪಲಬ್ಧವಾಗಿರುವ ಮೊಟ್ಟಮೊದಲ ಕೃತಿ 'ಕವಿರಾಜಮಾರ್ಗ'ದ ಇಂಗ್ಲಿಷ ಅನುವಾದವನ್ನು ಬಿಡುಗಡೆಗೊಳಿಸಿತು. ಈಗಾಗಲೇ ಕವಿರಾಜಮಾರ್ಗ ಜಗತ್ತಿನ ಮೂಲೆಮೂಲೆಗೂ ತಲುಪಿ ಕನ್ನಡದ ಕಂಪನ್ನು ಪಸರಿಸುತ್ತಿದೆ. ಒಳ್ಳೆಯ ವಿಮರ್ಶೆಯನ್ನು ಪಡೆಯುತ್ತಿದೆ. ಇದೀಗ ಫೆಬ್ರವರಿ 16ರಂದು ರನ್ನನ 'ಗದಾಯುದ್ಧಂ' ಕೃತಿಯ ಇಂಗ್ಲೀಷ್ ಅನುವಾದ ಜೆ.ಎನ್.ಯು. ಕನ್ವೆನ್ಷನ್ ಸೆಂಟರಿನ ಸಭಾಂಗಣದಲ್ಲಿ ಬಿಡುಗಡೆಯಾಯಿತು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಗದಾಯುದ್ಧಂ ಕೃತಿಯನ್ನು ಬಿಡುಗಡೆಗೊಳಿಸಿದರು. ಅವರೊಂದಿಗೆ ವೇದಿಕೆಯ ಮೇಲೆ ಅನುವಾದಕರಾದ ಪ್ರೊ. ಆರ್.ವಿ.ಎಸ್. ಸುಂದರಂ, ಕುಮಾರಿ ಅಮ್ಮೆಲ್ ಶೆರೋನ್ ಹಾಗೂ ಕನ್ನಡ ಪೀಠದ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಉಪಸ್ಥಿತರಿದ್ದರು.

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡ ಅಧ್ಯಯನ ಪೀಠ ರನ್ನದ 'ಗದಾಯುದ್ಧಂ'ದಂಥ ಮಹತ್ವದ ಕೃತಿಯನ್ನು ಇಂಗ್ಲೀಷಿಗೆ ಅನುವಾದಿಸಿ ಕನ್ನಡವನ್ನು ಜಾಗತಿಕ ಅಕ್ಷರಲೋಕಕ್ಕೆ ಪರಿಚಯಿಸುತ್ತಿರುವ ಕಾರ್ಯವನ್ನು ಶ್ಲಾಘಿಸಿದ ಡಾ.ವೆಂಕಟಾಚಲ ಹೆಗಡೆ ಅವರು, ತಾವು ಇತ್ತೀಚೆಗೆ ಕನ್ನಡದ ವಿದ್ವಾಂಸ ಪ್ರಮುಖ ಸಾಹಿತಿಗಳಾಗಿದ್ದ ಪ್ರೊ. ತೀ.ನಂ. ಶ್ರೀ ಅವರು ಸಂಪಾದಿಸಿದ 'ಗದಾಯುದ್ಧಂ ಸಂಗ್ರಹ'ದ ಓದಿನ ಅನುಭವವನ್ನು ಹಂಚಿಕೊಂಡರು. ಅಲ್ಲಲ್ಲಿ ಕೃತಿಯ ಸೊಗಡು, ಕಾಲ ದೇಶ ಕಥೆಯ ಚೆಲುವು ಇತ್ಯಾದಿಗಳ ಕುರಿತು ಅಡಿ ಟಿಪ್ಪಣಿಗಳಿಂದ ಕೂಡಿದ ಈ ಸಂಗ್ರಹ ನಲವತ್ತು ಐವತ್ತರ ದಶಕದ ಒಂದು ಅಗ್ರಗಣ್ಯ ಕೃತಿಯೆಂದು ಅಭಿಪ್ರಾಯಪಟ್ಟರು. ಕ್ಲಿಷ್ಟವಾದ ಹಳೆಗನ್ನಡವನ್ನು ಇಂಗ್ಲಿಷಿಗೆ ಅನುವಾದ ಮಾಡುವುದೇನು ಸರಳವಾದುದಲ್ಲ. ತುಂಬ ಕಷ್ಟಕರವಾದದ್ದು. ಅಂಥ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಿರುವ ಜೆ.ಎನ್. ಯು. ಕನ್ನಡ ಪೀಠಕ್ಕೆ ದೆಹಲಿ ಕರ್ನಾಟಕ ಸಂಘದ ಸಂಪೂರ್ಣ ಬೆಂಬಲವಿರುವುದಾಗಿ ಭರವಸೆಯ ಮಾತುಗಳನ್ನಾಡಿದರು.

ರನ್ನನಿಂದ ಬರೆಯಲ್ಪಟ್ಟ ಗದಾಯುದ್ಧ ಅಥವ ಸಾಹಸ ಭೀಮ ವಿಜಯ. ಕುರುಕ್ಷೇತ್ರದ ಕೊನೆಯ ಒಂದೂವರೆ ದಿನದ ಯುದ್ಧಕ್ಕೆ ಸಂಬಂಧಿಸಿದ ಕಥೆಯಾದರೂ, ಸಿಂಹಾವಲೋಕನ ಕ್ರಮದಲ್ಲಿ ಇಡೀ ಮಹಾಭಾರತದ ಕಥೆ ನಿರೂಪಿತವಾಗಿದೆ. ಹತ್ತು ಆಶ್ವಾಸಗಳುಳ್ಳ ಈ ಚಂಪೂ ಕೃತಿಯು ಅದನ್ನು ಇಂಗ್ಲೀಷಿಗೆ ಅನುವಾದ ಮಾಡುವ ಕಾರ್ಯ ಸುಲಭದ್ದಲ್ಲ. ಕರಗ ಹೊತ್ತುಕೊಂಡು ದ್ರೌಪದಿ ಪ್ರವೇಶಿಸುತ್ತಾಳೆ ಎಂಬ ಕನ್ನಡದ ಸಂಪ್ರದಾಯ ಪದ್ಧತಿಯನ್ನು ಇಂಗ್ಲೀಷ್‌ನಂಥ ಪರಕೀಯ ಸಂಸ್ಕೃತಿಯವರಿಗೆ ಹೇಗೆ ವಿವರಿಸೋದು? ಮೊದಲು 'ಕರಗ' ಅಂದ್ರೇನು ಅಂತ ಅಡಿಟಿಪ್ಪಣಿ ಹಾಕಿ ವಿವರಿಸಿ ಮುಂದೆ ಹೋಗಬೇಕಾಗುತ್ತದೆ. ಕೆಲವೊಮ್ಮೆ ಅನುವಾದ ಮುಂದುವರಿಯುವುದೇ ಇಲ್ಲ. ಸಮರ್ಪಕವಾದ ಪದಗಳು ಸಿಗದೇ ನಿಂತಲ್ಲೆ ಗಕ್ಕನೇ ನಿಂತುಬಿಡುತ್ತದೆ. ಆಗ ಅನೇಕ ನಿಘಂಟುಗಳನ್ನು ನೋಡಿ ಒಂದು ಸರಿಯಾದ ಪದವನ್ನು ಆರಿಸಬೇಕಾಗುತ್ತದೆ. 'ಯುದ್ಧ' ಎಂದರೆ war, Wage war ಎಂದಾಗುತ್ತದೆ, ಇಲ್ಲಿ ಭೀಮ ದುರ್ಯೋದನನ ನಡುವಿನ ದ್ವಂದ್ವ ಯುದ್ಧವನ್ನು ಡ್ಯೂಯೆಲ್ ವಾರ್ ಅನ್ನೊಕಾಗುತ್ತಾ 'ಕವಿರತ್ನ' ನಾವು ಜೆಮ್ ಅನ್ನುವ ಪದವನ್ನು ಇಂಗ್ಲೀಷಿಗರು ಬಳಸುವುದಿಲ್ಲ. ಅವರು ಜ್ಯೂವೆಲ್ ಅನ್ನುತ್ತಾರೆ. ಕವಿರತ್ನ, ಚಕ್ರವರ್ತಿ ಪದಗಳನ್ನು ಅನುವಾದಿಸೋದೆಷ್ಟು ಕಷ್ಟ. ಕೆಲ ಪದಗಳವನ್ನು ಇದ್ದ ಹಾಗೇ ಉಳಿಸಿಕೊಂಡು ವಿವರಣೆ ಕೊಡಬೇಕಾದಲ್ಲಿ ಅಡಿಟಿಪ್ಪಣಿ ಹಾಕಿ ಮುಂದೆ ಹೋಗಬೇಕಾಗುತ್ತದೆ ಎಂಬುದಾಗಿ ಪ್ರೊ. ಸುಂದರಂ ಸ್ವಾರಸ್ಯಕರವಾದ ಅನುವಾದದ ತೊಡಕಿನ ಸಂಗತಿಗಳನ್ನು ವಿವರಿಸಿದಾಗ ಸಭೆ ನಗೆಗಡಲಿನಲ್ಲಿ ಮುಳುಗಿತ್ತು.

ಆರಂಭದಲ್ಲಿ ಸ್ವಾಗತ ಮತ್ತು ಪ್ರಾಸ್ತಾವಿಕ ಮಾತುಗಳನ್ನಾಡಿದ ಡಾ. ಪುರುಷೋತ್ತಮ ಬಿಳಿಮಲೆ ಅವರು ರನ್ನನು ರಚಿಸಿದ್ದ ಹತ್ತನೇ ಶತಮಾನದ ಗದಾಯುದ್ಧಂ ಪಠ್ಯವೊಂದು ಹೇಗೆ ದೇಶ ಕಾಲದ ಹಂಗನ್ನೂ ಮೀರಿ ಸಮಕಾಲೀನ ಸಂದರ್ಭದಲ್ಲಿ ಪ್ರಸ್ತುತವಾಗುತ್ತದೆಂಬುದನ್ನು ಈ ಕಾರ್ಯಕ್ರಮದಲ್ಲಿ ಅರಿಯುವ ಪ್ರಯತ್ನ ಮಾಡಲಾಗಿದೆ. ಕುಮಾರವ್ಯಾಸನು ಕಾವ್ಯದ ಕೇಳುಗರ ಪಟ್ಟಿಯಲ್ಲಿ 'ಜಂಗಮ ಜನಾರ್ಧನ'ರನ್ನೂ ಸೇರಿಸಿದ್ದಾನೆ. ನಮ್ಮ ಕಾವ್ಯಗಳು ಜಂಗಮ ಜನಾರ್ಧನರನು ತಲುಪಿದ್ದು ಹೇಗೆ ಎಂದು ಕೇಳಿಕೊಂಡರೆ ನಮ್ಮಲ್ಲಿ ಜನಪ್ರಿಯವಾಗಿದ್ದ ಗಮಕ ಪರಂಪರೆಯ ಬಗ್ಗೆ ತಿಳುವಳಿಕೆ ಮೂಡುತ್ತದೆ. ಮುಂದೆ ಕರಿಕತೆ ಪರಂಪರೆಯು ಗಮಕ ಪರಂಪರೆಯನ್ನು ತನ್ನೊದನೆ ಸೇರಿಸಿಕೊಂಡು ಕನ್ನಡ ಕಾವ್ಯಗಳನ್ನು ಮತ್ತಷ್ಟು ವಿಸರಿಸಿತು. ಇದೇ ರೀತಿ 17 ಮತ್ತು 18ನೇ ಶತಮಾನದಲ್ಲಿ ಕನ್ನಡ ಕಾವ್ಯಗಳನ್ನೇ

ಆಧರಿಸಿ ಬರೆಯಲಾದ ನೂರಾರು ಸಂಖ್ಯೆಯ ಯಕ್ಷಗಾನ ಪ್ರಸಂಗಗಳು ಈ ಪರಂಪರೆಯನ್ನು ಬಣ್ಣ, ವೇಷ, ನೃತ್ಯ ಭಾಗವಂತಿಕೆ, ಸೃಜನಶೀಲ ಮಾತುಗಾರಿಕೆಯಿಂದ ಇನ್ನಷ್ಟು ಜೀವಂತಗೊಳಿಸಿದವು. ಮುಂದೆ ರಂಗಭೂಮಿಯ ಮೂಲಕ ಈ ಕಾವ್ಯಗಳು ನೋಡುಗರ ಕಣ್ಮನಗಳಲ್ಲಿ ಉಳಿಯುವಂತಾಯಿತು. ಎಂದು ವಿವರಿಸಿದ ಬಿಳಿಮಲೆ ಅವರು ರನ್ನನ ಅದ್ಭುತವಾದ ಕೃತಿಯನ್ನು ಅತ್ಯಂತ ಪ್ರೀತಿಯಿಂದ ಕಾಳಜಿಯಿಂದ ಅನುವಾದಿಸಿದ ಪ್ರೊ. ಆರ್.ವಿ.ಎಸ್. ಸುಂದರಂ ಮತ್ತು ಅಮ್ಮೆಲ್ ಶೆರೋನ್ ಅವರನ್ನು ಪುಷ್ಪಗುಚ್ಛಗಳಿಂದ ಅಭಿನಂದಿಸಿದರು. ಪುಸ್ತಕವನ್ನು ಬಿಡುಗಡೆಗೊಳಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರನ್ನು ಅಭಿನಂದಿಸಿದರು. ಈ ವರ್ಷಾಂತ್ಯದ ಹೊತ್ತಿಗೆ ಇನ್ನೊಂದು ಕನ್ನಡದ ಮಹತ್ವದ ಕೃತಿಯಾದ 'ವಡ್ಡಾರಾಧನೆಯ' ಅನುವಾದವನ್ನು ಬಿಡುಗಡೆ ಮಾಡುವ ವಿಚಾರವನ್ನು ಹಂಚಿಕೊಂಡರು.

ಭೋಜನ ವಿರಾಮದ ನಂತರ ಆರಂಭವಾದ ಗದಾಯುದ್ಧ ಗಮಕವನ್ನು ವಿಜಾಪುರದ ವಿದ್ವಾಂಸರಾದ ಶ್ರೀ ಕೃಷ್ಣ ಕೊಲ್ಹಾರ ಕುಲಕರ್ಣಿ ಮತ್ತು ಬೆಂಗಳೂರಿನ ಗಮಕಿ ಶ್ರೀ ತೆಕ್ಕೆಕೆರೆ ಸುಬ್ರಹ್ಮಣ್ಯ ಅವರು ನಡೆಸಿಕೊಟ್ಟರು. 'ಕವಿಚಕ್ರವರ್ತಿ', 'ಕವಿರತ್ನ' ಮುಂತಾದ ಬಿರುದುಗಳನ್ನು ಪಡೆದಿದ್ದ ಕವಿ 'ರನ್ನ'ನು ಕನ್ನಡ ಸಾಹಿತ್ಯ ಮಹಾಮುಕುಟದಲ್ಲಿನ ಮೂರು ಅನರ್ಘ್ಯ ರತ್ನಗಳಲ್ಲಿ ಒಬ್ಬ. ಜೀವಿಸಿದ್ದ ಈ ಜೈನಕವಿಯು 'ಅಜಿತನಾಥ ಪುರಾಣ', 'ಸಾಹಸಭೀಮ ವಿಜಯಂ/ ಗದಾಯುದ್ಧ' ಮುಂತಾದ 5 ಕೃತಿಗಳನ್ನು ರಚಿಸಿದ್ದಾನೆ. ವಾಗ್ದೇವಿಯ ಭಂಡಾರದ ಮುದ್ರೆಯ ನೊಡೆದಂ 'ಎಂದೂ ತನ್ನ ಕೃತಿಯನ್ನು ಪರೀಕ್ಷಿಪಂಗೆಂಬೆರ್ದೆಯೇ' ಎಂದು ತಾನೇ ಹೇಳಿಕೊಳ್ಳುವ ರನ್ನನಿಗೆ ತನ್ನ ಕವಿ ಸಾಮರ್ಥ್ಯದ ಕುರಿತು ಅಪಾರವಾದ ಅಭಿಮಾನವಿದ್ದುದನ್ನು ಕಾಣಬಹುದು. ದುರ್ಯೋಧನ ವೈಶಂಪಾಯನದಲ್ಲಿ ಅವಿತಿದ್ದಾಗ ಅವನನ್ನು ಕೆಣಕಿ ಕರೆಯುವ ಭಾಗವನ್ನು ಗಮಕ ಮತ್ತು ಅರ್ಥವಿವರಣೆಯನ್ನು ಇಬ್ಬರೂ ವಿದ್ವಾಂಸರು ಅರ್ಥಪೂರ್ಣವಾಗಿ ನಡೆಸಿಕೊಟ್ಟರು.

ತುಮಕೂರಿನ ಡಾ. ಲಕ್ಷ್ಮಣದಾಸ ಮತ್ತು ತಂಡದವರ ಗದ್ದಾಯುದ್ಧ ಹರಿಕತೆ ಹೆಚ್ಚು ಜೀವಂತಿಕೆಯಿಂದ ಕೂಡಿತ್ತು. ಗದಾಯುದ್ಧ ಪಠ್ಯ ಕಾಲದ ಹಂಗಿಲ್ಲದೇ ಕಾಲದಿಂದ ಕಾಲಕ್ಕೆ ಹೇಗೆ ಬೇಕಾದರೂ ಹರಿಯಬಲ್ಲುದು ಎಂಬುದನ್ನು ಲಕ್ಷ್ಮಣದಾಸ್ ಅವರು ಮತ್ತೊಮ್ಮೆ ತೋರಿಸಿಕೊಟ್ಟರು. ಹರಿಕತೆಯಲ್ಲಿ ಕುವೆಂಪು ಅವರ ಭಾರತ ಜನನಿಯ ತನುಜಾತೆಯೂ ಬಂದು ದೆಹಲಿಯ ಜೆ.ಎನ್.ಯು. ವಿದ್ಯಾರ್ಥಿಗಳನ್ನು ಆಶೀರ್ವದಿಸುತ್ತಾಳೆ, ಸಭೆಯಲ್ಲಿ ಆಸೀನರಾಗಿದ್ದ ಸುಂದರಂ, ಪ್ರೊ. ಎಚ್.ಎಸ್. ಶಿವಪ್ರಕಾಶ್, ಡಾ. ಬಿಳಿಮಲೆ ಎಲ್ಲರೂ ಹರಿಕತೆಯ ಭಾಗವಾಗಿ, ವೆಂಕಟರಮಣ ಗೋವಿಂದ ಗೋವಿಂದನೂ ಬಂದ, ಹರಹರ ಮಹಾದೇವ ರುದ್ರನೂ ಬಂದ, ಹೀಗೆ ರನ್ನನ ಗದಾಯುದ್ಧ ರುದ್ರ ಭೀಭೀತ್ಸರಸವನ್ನು ಶೃಂಗಾರರಸ, ಶೋಕರಸ, ಹಾಸ್ಯರಸವೆಲ್ಲವುಗಳ ರಸಾನುಭವವಾಗಿದೆಯೆಂದು ಮಂಗಳ ಹಾಡಿದರು.

ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯ ಕೆರೆಮನೆ ಶಿವಾನಂದ ಹೆಗಡೆ ತಂಡದವರು ಪ್ರಸ್ತುತಪಡಿಸಿದ ಗದಾಯುದ್ಧ ಯಕ್ಷಗಾನ ಪ್ರಸಂಗ ಕನ್ನಡದ ಪಠ್ಯಗಳು ಕಾಲದ ಹಂಗಿಲ್ಲದೇ ವಿಸ್ತಾರಗೊಳ್ಳುತ್ತಾ ಜಂಗಮರೂಪಿಯಾಗಿ ಜಂಗಮ ಜನಾರ್ಧನರನ್ನು ತಲುಪುತ್ತ ಜಾಗತೀಕರಣದ ಭಾರತೀಯ ಸಂದರ್ಭದಲ್ಲಿ ಹೇಗೆ ಬದುಕುಳಿಯುತ್ತವೆಂಬುದನ್ನು ಹೇಳುವಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಯಿತೆಂದು ಹೇಳಬಹುದು.

ಪಂಪನ ವಿಕ್ರಮಾರ್ಜುನ ವಿಜಯದ 12 ಮತ್ತು 13ನೇ ಆಶ್ವಾಸದಿಂದ ಪ್ರೇರಣೆ ಪಡೆದ ರನ್ನನು ಗದಾಯುದ್ಧಂ ಎಂಬ ಶಕ್ತಿಶಾಲಿ ಕಾವ್ಯವನ್ನು ಚಂಪೂರೂಪದಲ್ಲಿ ಮರುಸೃಷ್ಟಿಸಿದ. ಕುಮಾರವ್ಯಾಸ ಅದನ್ನು ಹಡಲು ಅನುಕೂಲವಾಗುವಂತೆ ಷಟ್ಪದಿಯಲ್ಲಿ ಬರೆದ, ಗಮಕಿಗಳು ಅದನ್ನು ಮನದುಂಬಿ ಹಾಡಿದರು, ಹರಿದಾಸರು ಹರಿಕತೆಮಾಡಿದರು, ಯಕ್ಷಗಾನ ಕಲಾವಿದರಂತೂ ಸಂಗೀತ, ಕುಣಿತ, ವೇಷಭೂಷಣ ಮತ್ತು ಅದ್ಭುತ ಮಾತುಗಾರಿಕೆಯ ಮೂಲಕ ಗದಾಯುದ್ಧವನ್ನು ಲಕ್ಷಾಂತರ ನೋಡುಗರಿಗೆ ಮುಟ್ಟಿಸಿದರು.

ಮಹಾನಗರದ ಏಕತಾನತೆಯ ಬದುಕಿನಿಂದ ಜಡಗೊಂಡ ಮನಸ್ಸುಗಳಿಗೆ ಇಡೀ ದಿನದ ಕಾರ್ಯಕ್ರಮ ಚೇತೋಹಾರಿಯಾಗಿತ್ತು.

*ರೇಣುಕಾ ನಿಡಗುಂದಿ*

*ಚಿತ್ರ ಕೃಪೆ : ಶ್ರೀ ದಿನೇಶ್ ಶೆಣೈ*



**ಹಿರಿಯ ಕಲಾವಿದರಾದ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಮತ್ತು ಶ್ರೀ ತೆಕ್ಕೆಕೆರೆ ಸುಬ್ರಹ್ಮಣ್ಯ ಅವರಿಂದ ರನ್ನನ ಗದಾಯುದ್ಧದ ಆಯ್ದ ಗಮಕ ವಾಚನ**



**ಹಿರಿಯ ಹರಿಕಥಾ ಕಲಾವಿದ ಡಾ. ಲಕ್ಷ್ಮಣದಾಸ ಮತ್ತು ತಂಡದಿಂದ ಗದಾಯುದ್ಧ ಕುರಿತ ಹರಿಕಥೆ**



**ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯ ಕಲಾವಿದರಿಂದ–ಗದಾಯುದ್ಧ ಯಕ್ಷಗಾನ ಪ್ರದರ್ಶನ**

# ಹಿಂದಿ ಸಾಹಿತ್ಯದ ವರನಾಮ ನಾಮವರ್ ಸಿಂಗ್

ಹಿಂದಿ ಸಾಹಿತ್ಯ ಲೋಕದ ಅಗ್ರಗಣ್ಯ ಕವಿ, ಚಿಂತಕ, ಭಾಷಾತಜ್ಞ ಡಾ. ನಾಮವರ್ ಸಿಂಗ್ ಅವರು ಇತ್ತೀಚೆಗೆ ನಿಧನ ಹೊಂದಿದ್ದಾರೆ. 2014ರ ಸಾಲಿನ ಕುವೆಂಪು ರಾಷ್ಟ್ರೀಯ ಪುರಸ್ಕಾರಕ್ಕೆ ಭಾಜನರಾದವರು ಎಂಬುದರಿಂದ ಅವರು ಕರ್ನಾಟಕಕ್ಕೂ ಸನಿಹವಾದವರು. ಆ ಸಮಯದಲ್ಲಿ ಅವರ ಜೊತೆ ಲೇಖಕಿ **ಶ್ರೀಮತಿ ರೇಣುಕಾ ನಿಡಗುಂದಿ** ನಡೆಸಿದ್ದ ಸಂದರ್ಶನವನ್ನು ಇಲ್ಲಿ ನೀಡಲಾಗಿದೆ.




**ದೆಹಲಿ ಕರ್ನಾಟಕ ಸಂಘದಲ್ಲಿ 'ಕುವೆಂಪು ರಾಷ್ಟ್ರೀಯ ಪ್ರಶಸ್ತಿ' ಸ್ವೀಕರಿಸಿದ ನಂತರ ಡಾ. ನಾಮವರ್ ಸಿಂಗ್ ಮಾತನಾಡುತ್ತಿರುವುದು (2015)**

ಹಿಂದಿ ಸಾಹಿತ್ಯ ಜಡವಾಗಿದ್ದ ಕಾಲದಲ್ಲಿ ಡಾ. ನಾಮವರ್ ಸಿಂಗ್ ಅವರು ತಮ್ಮ ಪ್ರಖರವಾದ ವೈಚಾರಿಕ ನೆಲೆಗಳಿಂದ ಹಿಂದಿ ಸಾಹಿತ್ಯ ವಿಮರ್ಶೆಗೆ ಸಾಮಾಜಿಕ ಆಯಾಮ ತಂದುಕೊಟ್ಟವರು. ವಿಶ್ವವಿದ್ಯಾಲಯದಲ್ಲಿ ಹಿಂದಿ ಪಠ್ಯಕ್ರಮದಲ್ಲಿ ಕಾಲೋಚಿತ ಬದಲಾವಣೆಯನ್ನು ತಂದ ಐತಿಹಾಸಿಕ ಶ್ರೇಯವೂ ನಾಮವರರಿಗೆ ಸಲ್ಲುತ್ತದೆ. ಪ್ರಖರ ವೈಚಾರಿಕತೆಯನ್ನು ಪ್ರಚುರಪಡಿಸಲು ಆಲೋಚನ್ ಎಂಬ ತ್ರೈಮಾಸಿಕವೊಂದನ್ನು ಸಂಪಾದಿಸುತ್ತಿದ್ದರು. ಈ ಪತ್ರಿಕೆಯು ಹಿಂದಿ ಸಾಹಿತ್ಯ ವಿಮರ್ಶೆಯ ಜಾಡನ್ನೇ ಬದಲಾಯಿಸಿತು. ಕವಿತಾ ಕೇ ನಯೇ ಪ್ರತಿಮಾನ್–ಹಿಂದಿ ವಿಮರ್ಶೆಗೆ ಹೊಸ ಪರಿಭಾಷೆಗಳನ್ನು ಒದಗಿಸಿಕೊಟ್ಟಿತು. ನಾಮವರ್ ಸಿಂಗ್ ಅವರೊಡನೆ ನಡೆಸಿದ ಸಂದರ್ಶನ ಇಂತಿದೆ.

**ತಾವು ಆರಂಭದಲ್ಲಿ ಕವಿಯಾಗಿದ್ದು ನಂತರ ಕಾವ್ಯದ ಹಾದಿಯನ್ನು ಬಿಟ್ಟು ಗದ್ಯದತ್ತ ತಿರುಗಿದ್ದು ಹೇಗೆ?**

ಹಾಗೇನಿಲ್ಲ. ಆರಂಭಿಕ ದಿನಗಳಲ್ಲಿ ಪ್ರತಿಯೊಬ್ಬರೂ ಕವಿಯಾಗಿಯೇ ಇರುತ್ತಾರೆ. ಆದರೆ, ನನಗೆ ಮೊದಲಿನಿಂದಲೂ ಅಧ್ಯಾಪಕನಾಗುವ ಆಸೆಯಿತ್ತು. ಅದೂ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿಯೇ ಅಧ್ಯಾಪಕನಾಗಬೇಕೆಂಬ ಕನಸು. ಕಾಶಿ ಹಿಂದೂ ವಿಶ್ವವಿದ್ಯಾಲಯದಲ್ಲಿ ನನ್ನ ಮೊದಲ ಗುರು ಪಂ.ಕೇಶವ್ ಪ್ರಸಾದ್ ಮಿಶ್ರರ ಪ್ರೇರಣೆಯಿಂದಲೇ 1950ರಲ್ಲಿ ಹಿಂದಿ ಕೇ ವಿಕಾಸ್ ಮೇ ಅಪಭ್ರಂಶ್ ಕಾ ಯೋಗ ಎನ್ನುವ ವಿಷಯದ ಮೇಲೆ ಎಂ.ಎ.ಯಲ್ಲಿ ಪ್ರಬಂಧವನ್ನು ಮಂಡಿಸಿದೆ. ಅದೇ ಕಾಲಕ್ಕೆ ಆಚಾರ್ಯ ಹಜಾರಿಪ್ರಸಾದ್ ದ್ವಿವೇದಿ ಅವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಹಿಂದಿ ವಿಭಾಗದ ಮುಖ್ಯಸ್ಥರಾಗಿ ಶಾಂತಿನಿಕೇತನದಿಂದ ಆಗಮಿಸಿದ್ದರು. ಆ ದಿನಗಳಲ್ಲಿ ಆಚಾರ್ಯರಂಥ ಪ್ರಖರ ವಿದ್ವಾಂಸರ ಮಾರ್ಗದರ್ಶನ ಲಭಿಸಿದ್ದು ನನ್ನ ಪುಣ್ಯ. ಅವರು ಅನೇಕ ಭಾಷಾಪ್ರವೀಣರಷ್ಟೇ ಅಲ್ಲ, ಸಂಸ್ಕೃತ, ಪ್ರಾಕೃತ, ಅಪಭ್ರಂಶದ ಪಂಡಿತರಾಗಿದ್ದರು. ಆಗ ಆಚಾರ್ಯರೊಂದು ಮಾತನ್ನು ಹೇಳಿದರು–"ನಿನಗೆ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕನಾಗಬೇಕಾದರೆ ನೀನು ಭಾಷಾಶಾಸ್ತ್ರ ಹಾಗೂ ಅಪಭ್ರಂಶ್‌ನಲ್ಲಿ ಪ್ರವೀಣನಾಗು'. ಆ ವಿಭಾಗದಲ್ಲಿ ಕಲಿಸಲು ಅಧ್ಯಾಪಕರೇ ಇದ್ದಿಲ್ಲ ಆಗ. ಹೀಗೆ ನನ್ನ ಅಭಿರುಚಿಯೂ ಅಪಭ್ರಂಶ್ ಹಾಗೂ ಭಾಷಾಶಾಸ್ತ್ರದಲ್ಲಿ ಬೆಳೆಯುತ್ತ ಹೋಯಿತು, ಕಾವ್ಯ ಹಿಂದೆ ಉಳಿದುಹೋಯಿತು.

ವಿದ್ಯಾರ್ಥಿ ಜೀವನದಲ್ಲಿ ಕವಿತೆ ಬರೆಯುತ್ತಿದ್ದ ನಾನು ನನ್ನ ಮೊದಲ ಕವಿತಾ ಸಂಕಲನ ನೀಮ್ ಕಾ ಪೂಲ್‌ನ ಹಸ್ತಪ್ರತಿಯನ್ನು ಪ್ರಕಾಶಕರಿಗೆ ಕೊಟ್ಟಿದ್ದೆ. ಸ್ವಾತಂತ್ರ್ಯದ ಹೋರಾಟಗಳ ಸಮಯದಲ್ಲಿ ಆ ಪ್ರೆಸ್ ಮುಚ್ಚಿಹೋಗಿ ನನ್ನ ಸಂಕಲನ ಕೊನೆಗೂ ಪ್ರಕಟವಾಗಲೇ ಇಲ್ಲ. 1955ರ ಸುಮಾರಿಗೆ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಹಿಂದಿ ವಿಭಾಗದ ಅಧ್ಯಾಪಕ ವೃತ್ತಿ ನನಗೆ ದಕ್ಕಿತು. ಆ ನಂತರದ ನನ್ನ ಜೀವಮಾನವೆಲ್ಲ ಪಾಠ ಮಾಡುವುದರಲ್ಲಿ, ಶೋಧನೆಯಲ್ಲಿ, ಚಿಂತನೆಯಲ್ಲಿ ಕಳೆಯಿತು.

ಆ ಕಾಲದಲ್ಲಿ ದಕ್ಷಿಣದ ಕೇರಳ, ಆಂಧ್ರಪ್ರದೇಶ, ಕರ್ನಾಟಕದಿಂದ ಹಿಂದಿ ಕಲಿಕೆಗಾಗಿ ಬಹಳಷ್ಟು ವಿದ್ಯಾರ್ಥಿಗಳು ಬನಾರಸ್ ಹಿಂದೂ ವಿದ್ಯಾಲಯಕ್ಕೆ ಬರುತ್ತಿದ್ದರು. ಕೇರಳದ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಿರುತ್ತಿತ್ತು. ಹಿಂದಿ ಭಾಷೆ ಸ್ತ್ರೀಯರ ಭಾಷೆ. ಮೃದು ಭಾಷೆ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ವೈಸ್ ಚಾನ್ಸಲರ್ ಆಗಿದ್ದರಿಂದಲೋ ಏನೋ ದಕ್ಷಿಣದ ರಾಜ್ಯಗಳಿಂದ ಸಾವಿರಾರು ವಿದ್ಯಾರ್ಥಿಗಳು ಹಿಂದಿ ಕಲಿಕೆಗಾಗಿ ಕಾಶಿ ಹಿಂದೂ ವಿಶ್ವವಿದ್ಯಾಲಯಕ್ಕೇ ಬರುತ್ತಿದ್ದರು. ಅವರಲ್ಲಿ ನಾ. ನಾಗಪ್ಪ ಎಂಬ ಕರ್ನಾಟಕದ ವಿದ್ಯಾರ್ಥಿ ಮೊದಲ ಬ್ಯಾಚಿನ ಹಿಂದೀ ಟಾಪರ್ ಆಗಿದ್ದ. (ನಾಮವರ್ ಸಿಂಗರು ಅವರ ಹೆಸರನ್ನು ತಮ್ಮ ಡೈರಿಯಲ್ಲಿ ದಾಖಲಿಸಿಟ್ಟುಕೊಂಡಿದ್ದಾರೆ, ಹುಡುಕಿ ತೆಗೆದು ಹೇಳಿದರು).

**ಆ ತಲೆಮಾರಿನ ಅಸಂಖ್ಯಾತ ಲೇಖಕರು, ಚಿಂತರು ಮಾರ್ಕ್ಸ್‌ವಾದದ ವೈಚಾರಿಕತೆಯನ್ನು ಘೋಷಿತ ರೂಪದಲ್ಲಿ ಒಪ್ಪಿಕೊಂಡಿದ್ದರು. ಹಿಂದಿ**

**ಸಾಹಿತ್ಯ ಲೋಕದಲ್ಲಿ ಹೊಸ ಅಲೆಯ ಕುರಿತು ತಿಳಿಸಿ.**

ಜವಾಹರ್‌ಲಾಲ್ ನೆಹರೂ ಸ್ವತಃ ಸಮರ್ಥ ಸಮಾಜವಾದಿಯಾಗಿದ್ದು, ಸೋವಿಯತ್ ದೇಶದೊಂದಿಗೆ ಭಾರತದ ಸಂಬಂಧ ಪೂರಕವಾದ ಕಾಲದಲ್ಲಿ ಬರಹಗಾರರು ಬಡತನ, ರೈತವರ್ಗ, ಹಿಂದುಳಿದವರ್ಗ ಹಾಗೂ ಸ್ತ್ರೀಯರ ಹಿತರಕ್ಷಣೆಯ ಧರ್ಮವನ್ನು ಸಾಹಿತ್ಯದ ಮೂಲಕವೂ ಪಾಲಿಸತೊಡಗಿದ್ದರು. 1936ರಲ್ಲಿ ಪ್ರಗತಿಶೀಲ ಬರಹಗಾರರ ಸಂಘ ಲಕ್ನೋದಲ್ಲಿ ಸ್ಥಾಪಿತಗೊಂಡಿತು. (Progressive Writers Association). ಅದರ ಮೊದಲ ಅಧ್ಯಕ್ಷರು ಪ್ರಖ್ಯಾತ ಕಾದಂಬರಿಕಾರ, ಚಿಂತಕ ಪ್ರೇಮಚಂದರೇ ಆಗಿದ್ದರು. ಸಾವಿರಾರು ಬರಹಗಾರರು ಈ ಸಂಘದ ಸದಸ್ಯರಾದರು. ಪ್ರೇಮಚಂದ ತಮ್ಮ ಸಾಹಿತ್ಯದ ಮೂಲಕ, ವರ್ಗಹೀನ, ವರ್ಣಹೀನ ಸಮಾಜದ ಸ್ಥಾಪನೆಗೆ ಒತ್ತುನೀಡಿದರು. ಹಿಂದಿ ಸಾಹಿತ್ಯಲೋಕದಲ್ಲಿ ಹೀಗೆ ಸಂಘಟಿತರೂಪದಲ್ಲಿ ಪ್ರಗತಿಶೀಲತೆಯ ಹೊಸ ಅಲೆ ಪ್ರಾರಂಭಿಸಿತು. ಪ್ರೇಮಚಂದ್ ಹಾಗೂ ನಿರಾಲಾರಂಥ ಅಗ್ರಮಾನ್ಯರು ವೈಚಾರಿಕತೆಯ ಮಾಧ್ಯಮದಿಂದ ಸಾಮಂತೀ ಸಂಸ್ಕೃತಿಯನ್ನು ವಿರೋಧಿಸಿದರು.

**ಕಬೀರ್ ಔರ್ ದೂಸರೀ ಪರಂಪರಾ ಕೀ ಖೋಜ... ಬರೆಯಲು ಪ್ರೇರೇಪಿಸಿದ ಅಂಶಗಳು? ತಮ್ಮನ್ನು ಗಾಢವಾಗಿ ಪ್ರಭಾವಿಸಿದ ಲೇಖಕರು?**

ಮುನ್ಷಿ ಪ್ರೇಮಚಂದ್, ನಿರಾಲಾರಿಂದ ಪ್ರಭಾವಿತರಾಗದವರಿದ್ದಾರೆಯೇ? ನಾನು ಹುಟ್ಟಿದ ಬನಾರಸ್ ಬರೀ ಊರಲ್ಲ, ಅದು ಸಂಸ್ಕೃತಿ. ಪರಂಪರೆ. ಅತ್ಯಂತ ಪುರಾತನ ಸಂಸ್ಕೃತಿಯ ಊರು. ಒಂದೇ ಸಂಸ್ಕೃತಿ, ಒಂದೇ ಪರಂಪರೆಯದಲ್ಲ. ಸಂಸ್ಕೃತಿ–ಪರಂಪರೆ ಪುಸ್ತಕಗಳಲ್ಲಿಲ್ಲ. ಸಂಸ್ಕೃತಿ ಕಾಶಿಯ ಓಣಿಗಳಲ್ಲಿದೆ, ಗಲ್ಲಿಗಳಲ್ಲಿದೆ, ಘಾಟ್‌ಗಳಲ್ಲಿದೆ. ಒಂದೆಡೆ ಕಬೀರರಿದ್ದಾರೆ, ರೇಶಿಮೆ ಸೀರೆ ನೇಯುವ ನೇಕಾರರಿದ್ದಾರೆ, ಇನ್ನೊಂದೆಡೆ ಘಾಟ್‌ನಲ್ಲಿ ತುಲಸೀದಾಸ ಇದ್ದಾರೆ. ಮತ್ತೊಂದು ಗಲ್ಲಿಯಲ್ಲಿ ಪ್ರೇಮಚಂದ್ ಇದ್ದರು. ಬನಾರಸಿನ ರಸ್ತೆಗಳಲ್ಲಿ ಓಡಾಡಿದರೆ ಸಾಕು ಸಂಸ್ಕೃತಿ ಗೋಚರಿಸುತ್ತದೆ. ಇಂಥ ಊರಿನಲ್ಲಿ ಹುಟ್ಟಿ ಬೆಳೆದ ನನಗೆ ಪರಂಪರೆಯ ಬಗ್ಗೆ ಅಗಾಧ ಕುತೂಹಲವಿದ್ದುದು ಸಹಜವೇ ಆಗಿತ್ತು.

ಇನ್ನೊಂದು ಮಹತ್ವಪೂರ್ಣ ಮಾತೆಂದರೆ, ನನ್ನ ಗುರುಗಳಾದ ಆಚಾರ್ಯ ಹಜಾರಿಪ್ರಸಾದ್ ದ್ವಿವೇದಿಯವರ ಮೂಲಕವೇ ನನಗೆ ಮೊತ್ತಮೊದಲ ಬಾರಿ ಅನಿಸಿದ್ದೆಂದರೆ, ನಮ್ಮ ಹಿಂದೀ ಸಾಹಿತ್ಯಕ್ಕೆ ಒಂದೇ ಪರಂಪರೆಯಿಲ್ಲ, ಅನೇಕ ಪರಂಪರೆಗಳಿವೆ. ಕಬೀರ, ತುಲಸೀ, ಸೂರದಾಸ, ಭರತೇಂದು ಹೀಗೇ. ಬಹುತೇಕ ಹಿಂದಿಭಾಷಿಕರು ಸೂರದಾಸ್ ಅಥವಾ ತುಲಸೀದಾಸ ಪರಂಪರೆಯನ್ನೇ ಮೂಲ ಪರಂಪರೆಯಾಗಿ ನೋಡುತ್ತಾರೆ, ಇಂದಿನ ಸಿದ್ಧಪರಂಪರೆಗಿಂತ ಹೆಚ್ಚು ಜೀವಂತವಾಗಿದ್ದುದು ಮತ್ತೊಂದಿದೆ. ಸಿದ್ಧ ಪರಂಪರೆಯನ್ನು ನಿರಾಕರಿಸುವ ಸಾಹಸದಿಂದ ಹುಟ್ಟುವ ಕಬೀರ ಪರಂಪರೆ ಹೆಚ್ಚು ಸಾರ್ಥಕವೆನಿಸುತ್ತದೆ. ಆಚಾರ್ಯ ದ್ವಿವೇದಿಯವರು ನೇಕಾರ ಪರಂಪರೆಯತ್ತ ಗಮನವನ್ನು ಸೆಳೆದರು. ಇದೇ ಶೋಧನೆಯ ಜಿಜ್ಞಾಸೆಯಲ್ಲಿ ದೂಸರಿ ಪರಂಪರಾ ಕೀ ಖೋಜ ಹುಟ್ಟಿಕೊಂಡಿತು. ಆದರೆ, ಶೋಧನೆ ಅಲ್ಲಿಗೇ ನಿಂತಿಲ್ಲ ಇನ್ನೂ ಬಹಳಷ್ಟಿದೆ.

**ತಮಗೆ ಕುವೆಂಪು ರಾಷ್ಟ್ರೀಯ ಪುರಸ್ಕಾರ ಲಭಿಸಿದೆ. ಕನ್ನಡ ಸಾಹಿತ್ಯ ಹಾಗೂ ಸಾಹಿತಿಗಳೊಂದಿಗಿನ ನಿಮ್ಮ ಒಡನಾಟದ ಬಗ್ಗೆ ತಿಳಿಸಿ.**

ನಾನು ಕರ್ನಾಟಕದ ತುಂಬೆಲ್ಲ ಬಹಳಷ್ಟು ಸಾರಿ ಓಡಾಡಿದ್ದೇನೆ. ಧಾರವಾಡ, ಮೈಸೂರು, ಶಿವಮೊಗ್ಗ–ಇನ್ನೂ ಅನೇಕ ಕಡೆಗಳಲ್ಲಿ ಬಂದಿದ್ದೇನೆ. ಕೇರಳದ ಬಹಳಷ್ಟು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಕಾಶಿ ವಿದ್ಯಾಲಯದ ಹಿಂದಿ ವಿಭಾಗದಲ್ಲಿ ಓದುತ್ತಿದ್ದು, ಕೇರಳಕ್ಕೆ ಸಾಕಷ್ಟು ಬಾರಿ ಹೋಗಿದ್ದೇನೆ. ತಮಿಳುನಾಡಿನಿಂದ ಅಷ್ಟೊಂದು ವಿದ್ಯಾರ್ಥಿಗಳು ಬರುತ್ತಿದ್ದಿಲ್ಲ. ಕರ್ನಾಟಕದ ನಾಗಪ್ಪಾಜೀ ಅವರನ್ನೂ ಅವರ ಇಳಿವಯಸ್ಸಿನಲ್ಲಿ ಭೇಟಿಯಾಗಿದ್ದೆ. ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ ಅವರೂ ನನ್ನ ಒಳ್ಳೆಯ ಮಿತ್ರರು, ಅಪ್ಪಟ ಲೋಹಿಯಾವಾದಿಯಾಗಿದ್ದರು. ಬಿ.ವಿ. ಕಾರಂತರು, ಬೇಂದ್ರೇಜೀ, ಶಿವರಾಮ ಕಾರಂತಜೀ ಎಲ್ಲರನ್ನೂ ಬಲ್ಲೆ. ಕುವೆಂಪುಜೀ ರಾಮಾಯಣದರ್ಶನಂ ಬರೆದ ಮೇರು ಕವಿಗಳು. (ಕುವೆಂಪು ಪ್ರತಿಷ್ಠಾನದಿಂದ ತಮಗೆ ಬಂದ ಪುಸ್ತಕಗಳನ್ನು ತೋರಿಸಿದರು).

ನಾನು ಭೇಟಿ ಆಗಲು ಹೋದ ದಿನವೇ ಅವರ ಒಬ್ಬ 79 ವರ್ಷದ ಶ್ರೀವಲ್ಲಭ ಶುಕ್ಲಾ ಜೀ ಎಂಬ ಶಿಷ್ಯರು ದೂರದ ಊರಿನಿಂದ ಭೇಟಿಗಾಗಿ ಆಗಮಿಸಿದ್ದರು. ತಮ್ಮ ಗುರುಗಳ ಪಾದಗಳಿಗೆ ನಮಸ್ಕರಿಸಿ ತಮ್ಮ ಸರದಿಗಾಗಿ ಕಾಯುತ್ತಿದ್ದರು. ಆ ಗುರು–ಶಿಷ್ಯರನ್ನು ತಮ್ಮ ಹಳೆಯ ದಿನಗಳನ್ನು ಮೆಲುಕುಹಾಕಲು ಏಕಾಂತದಲ್ಲಿ ಬಿಟ್ಟು, ಮತ್ತೊಮ್ಮೆ ಬರುವುದಾಗಿ ಹೇಳಿ, ನಾನು ಹೊರಡಲು ಅನುಮತಿ ಕೇಳಿ ಹೊರಟುಬಂದೆ.



*ರೇಣುಕಾ ನಿಡಗುಂದಿ*
(ಉದಯವಾಣಿ ಪ್ರಕಟಿತ)




**ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ 2015ರಲ್ಲಿ ಡಾ. ನಾಮವರ್ ಸಿಂಗ್ ಅವರಿಗೆ 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ನೀಡಿದ ಸಂದರ್ಭ. ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಈ ಸಮಾರಂಭದಲ್ಲಿ ಪ್ರತಿಷ್ಠಾನದ ಅಧ್ಯಕ್ಷ ನಾಡೋಜ ಪ್ರೊ. ಹಂಪಾ ನಾಗರಾಜಯ್ಯ, ಪ್ರಶಸ್ತಿ ಪ್ರದಾನ ಮಾಡಿದ ನ್ಯಾಯಮೂರ್ತಿ ಶ್ರೀ ಗೋಪಾಲ ಗೌಡ ಮತ್ತು ಗಣ್ಯರನ್ನು ಕಾಣಬಹುದು.**



# ಜಯದೇವಣ್ಣ ಟಿ.ಎಸ್.ರವರ 'ಮಂಡಲ' ಕಲಾಪ್ರದರ್ಶನ



ಮೈಸೂರಿನ ಕಲಾವಿದರಾದ ಜಯದೇವ್‌ರವರ 'ಮಂಡಲ' ಶೀರ್ಷಿಕೆಯ ಕಲಾಪ್ರದರ್ಶನವು ಜನವರಿ 28ರಂದು ದೆಹಲಿಯ ಇಂಡಿಯನ್ ಹ್ಯಾಬಿಟೇಟ್ ಸೆಂಟರ್‌ನಲ್ಲಿ ಜರಗಿತು.

ಗೌರವಾನ್ವಿತ ಅತಿಥಿಗಳಾದ ಪ್ರತಿಭ ಅಗರ್‌ವಾಲ್, ಪ್ರಮೋಟರ್ ಆರ್ಟ್ ಲೈಫ್ ಗ್ಯಾಲರಿ, ಪ್ರೀತಿ ಬಜಾಜ್, ಕೋ-ಪ್ರಮೋಟರ್ ಆರ್ಟ್ ಲೈಫ್ ಗ್ಯಾಲರಿ, ಡಾ. ಜ್ಯೋತಿ ಕಪೂರ್ ಮತ್ತು ರಾಷ್ಟ್ರಪಶಸ್ತಿ ವಿಜೇತ ಕಲಾವಿದ ಸುಧೀರ್ ವಿ. ಫಡ್ನೀಸ್ ಇವರುಗಳ ಉಪಸ್ಥಿತಿಯಲ್ಲಿ ಉದ್ಘಾಟನೆಗೊಂಡು ಜನವರಿ 31ರವರೆಗೆ ಪ್ರದರ್ಶನಗೊಂಡಿತು.

ಹುಲಿವೇಷವು ಜಾನಪದ ಕಲೆಯ ಒಂದು ಭಾಗ. ದಕ್ಷಿಣ ಕನ್ನಡದ ಭಾಗದಲ್ಲಿ ಹೆಚ್ಚಾಗಿ ಕಾಣಬರುವ ಈ ಹುಲಿವೇಷಧಾರಿಗಳ ಜೊತೆಗಿನ ಕಲಾವಿದನ ಒಡನಾಟ ಅವರ ದೃಷ್ಟಿಕೋನವನ್ನು ಬದಲಿಸಿತು. ಹಗಲಲ್ಲಿ ಘರ್ಜಿಸುತ್ತಾ ಕುಣಿದು ರಾತ್ರಿಯಾಗುತ್ತಿದ್ದಂತೆ ನಿತ್ರಾಣವಾಗಿ ದಣಿದು ಧರಣಿಗೊರಗಿ ನಿಸ್ಸಹಾಯಕರಾದ ಬದುಕಿನ ನಿಜ ಪಾತ್ರಗಳು ಕಾಡಿವೆ. ಕಾಡಿದ ಪಾತ್ರಗಳ ಹಿಂದೆ ಬಿದ್ದುದರ ಪರಿಣಾಮವಾಗಿ 'ಮಂಡಲ' ಶೀರ್ಷಿಕೆಯ ಕಲಾಕೃತಿಗಳ ಸೃಷ್ಟಿಗೆ ಕಾರಣವಾಗಿವೆ.

ಈ ಕೃತಿಗಳು ನೋಡುಗರ ಮನಸೆಳೆದು ನಿಜ ಜೀವನದ ದರ್ಶನ ಮಾಡಿಸುತ್ತವೆ. ವೇಷಧಾರಿಗಳ ಬದುಕಿನ ದರ್ಶನ ಮಾಡಿಸುವಲ್ಲಿ ಕಲಾ ಪ್ರದರ್ಶನ ಯಶಸ್ವಿಯಾಗಿರುತ್ತದೆ.

***ಜಯದೇವಣ್ಣ ಟಿ.ಎಸ್.***



## ಜನಕಪುರಿ ಮಹಿಳಾ ಮಂಡಳಿಯ ನೂತನ ಅಧ್ಯಕ್ಷರಾಗಿ ಜಯಶ್ರೀ ಬಸವರಾಜು

ಜನಕಪುರಿ ಮಹಿಳಾ ಮಂಡಳಿಯು ಇತ್ತೀಚೆಗೆ ಸಭೆ ಸೇರಿ ನೂತನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ನೂತನ ಅಧ್ಯಕ್ಷೆಯಾಗಿ ಶ್ರೀಮತಿ ಜಯಶ್ರೀ ಬಸವರಾಜು ಆಯ್ಕೆಯಾದರು. ಪದಾಧಿಕಾರಿಗಳು ಮತ್ತು ಸದಸ್ಯರ ವಿವರ ಇಂತಿದೆ.


ಕಾರ್ಯದರ್ಶಿ : ಶ್ರೀಮತಿ ಮಾಲಿನಿ ಪ್ರಹ್ಲಾದ್, ಜಂಟಿ ಕಾರ್ಯದರ್ಶಿ : ಶ್ರೀಮತಿ ರೇಣುಕಾ ಸಾಹುಕಾರ್, ಖಜಾಂಚಿ : ಶ್ರೀಮತಿ ಲಾವಣ್ಯ ಬಸವರಾಜ್. ಸದಸ್ಯರು : ಶ್ರೀಮತಿ ಸವಿತಾ ಇನಾಮದಾರ, ಶ್ರೀಮತಿ ಪ್ರೇರಣಾ ವೆಂಕಟೇಶ್, ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ಕಲ್ಪನಾ ದೇಶಪಾಂಡೆ.

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-




**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-



**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-



**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-



**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-



**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-



**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-



**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-




**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-



**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-



**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-



# ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನಿಂದ ವನವಿಹಾರ



ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್, ದಿನಾಂಕ 05.02.2019ರಂದು ಲೋಧಿ ಗಾರ್ಡನ್‌ನಲ್ಲಿ ವನವಿಹಾರವನ್ನು ಏರ್ಪಡಿಸಿತ್ತು. ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು. ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಹಾಗೂ ಸದಸ್ಯೆಯರು, ಹಿರಿಯ ಹಾಗೂ ಕಿರಿಯ ಸದಸ್ಯೆಯರು ಹರುಷದಿಂದ ಪಾಲ್ಗೊಂಡು ಚಳಿಗಾಲದ ಎಳೆ ಬಿಸಿಲಿನಲ್ಲಿ ಸಂತಸದಿಂದ ಸಂಭ್ರಮಿಸಿದರು.

*ಲೀಲಾವತಿ ಗುರುಪ್ರಸಾದ್*

# ಎಸ್. ಎಂ. ಗಲಗಲಿ ನಿಧನ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಎಸ್. ಎಂ. ಗಲಗಲಿ ಅವರು ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರೋತ್ಸಾಹಿಸುತ್ತಾ ಬಂದಿದ್ದರು. ಇವರು ದಿನಾಂಕ 14.02.2019ರಂದು ದೈವಾಧೀನರಾಗಿರುತ್ತಾರೆ. ಹಾಗೆಯೆ ಇವರ ಧರ್ಮ ಪತ್ನಿ ನಿರ್ಮಲಾ ಎಸ್. ಗಲಗಲಿ ಅವರು ಕೆಲ ಸಮಯಗಳ ಹಿಂದೆ ವಿಧಿವಶರಾಗಿರುತ್ತಾರೆ ಎಂಬ ಬೇಸರದ ಸುದ್ದಿ ತಿಳಿದು ಬಂತು. ಅಗಲಿದ ಗಲಗಲಿ ದಂಪತಿಗಳಿಗೆ ದೆಹಲಿ ಕರ್ನಾಟಕ ಸಂಘದ ಸಂತಾಪಗಳು

# ಆರ್.ಡಿ. ಪಾಟೀಲ್ ನಿಧನ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಆರ್.ಡಿ. ಪಾಟೀಲರು ಅಕ್ಟೋಬರ್ 2018ರಲ್ಲಿ ಬೆಂಗಳೂರಿನ ಅಪೋಲೋ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಪಾಟೀಲರು ತಮ್ಮ 69ನೇಯ ವಯಸ್ಸಿನಲ್ಲಿ ಪತ್ನಿ ಶ್ರೀಮತಿ ಸಹನಾ ಪಾಟೀಲ, ಪುತ್ರ, ಪುತ್ರಿ ಹಾಗೂ ನಾಲ್ಕು ಜನ ಮೊಮ್ಮಕ್ಕಳನ್ನು ಅಗಲಿದ್ದಾರೆ.

ಆರಂಭದಲ್ಲಿ ಅಂಚೆ ಮತ್ತು ತಂತಿ ಇಲಾಖೆಯ ಧಾರವಾಡದಿಂದ ಸೈನ್ಯ ಅಂಚೆ ಸೇನೆಗೆ ಸೇರಿದ ರಂಗನಾಥ ಪಾಟೀಲರು ಹಲವಾರು ವರುಷ ದೆಹಲಿಯಲ್ಲಿದ್ದು, ದಿವಂಗತ ಶ್ರೀಮತಿ ಡಾ. ಸರೋಜಿನಿ ಮಹಿಷಿಯವರ ಕಾಲದಲ್ಲಿ ಸಂಘದ ಹಾಗೂ ಎ.ಪಿ.ಎಸ್. ಕನ್ನಡ ಸಂಘ ಸುಬ್ರೋತೋ ಪಾರ್ಕಿನ ವಾಯುದಳ ಕನ್ನಡ ಸಂಘದೊಂದಿಗೆ 1981–82ರಲ್ಲಿ ಎರಡು ಕನ್ನಡ ನಾಟಕಗಳನ್ನು ಆಡಿದ್ದರು.

ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಪ್ಯಾರೇಲಾಲ ಭವನ (ಗಾಂಧೀ ಮಮೊರಿಯಲ್)ದ ಅಡಿಟೋರಿಯಂದ ಸ್ಟೇಜಿನ ಮೇಲೆ ಐತಿಹಾಸಿಕ ನಾಟಕ "ಎಚ್ಚಮ ನಾಯಕ"ದ ವಿಜಯನಗರ ಸಾಮ್ರಾಜ್ಯದ ಮಹಾರಾಜರಾದ ಶ್ರೀರಂಗರಾಯರ ಪಾತ್ರ ಮಾಡಿ ಅಪಾರ ಜನ ಮೆಚ್ಚುಗೆ ಪಡೆದಿದ್ದಾರೆ.

ದಿವಂಗತ ಶುಭಾ ಸಿನ್ನೂರದಾಸ್ ಅಧ್ಯಕ್ಷರಾಗಿದ್ದ ಜೋಳದ ಬಳಗದಲ್ಲಿ ಪಾಟೀಲರು ಖಜಾಂಚಿಯಾಗಿದ್ದರು. ಎಪಿಎಸ್ ಕಾಲೋನಿಯಲ್ಲಿ ಕನ್ನಡ ಬಂಧುಗಳನ್ನು ಸಂಘಟಿಸುವ ಕಾರ್ಯದಲ್ಲಿ ಆ ಕಾಲದಲ್ಲಿ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀ ಎಸ್.ಬಿ. ಕುರಂದವಾಡರಿಗೆ ಸಹಾಯಕರಾಗಿ ದುಡಿದಿದ್ದರು.

ದೇವರು ಮೃತರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

*ಸುಧಾಕರ ಕುರಂದವಾಡ*

**ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಹಿರಿಯ ಕನ್ನಡಿಗ ಶ್ರೀ ಆರ್.ಡಿ. ಪಾಟೀಲ್ ಅವರ ನಿಧನಕ್ಕೆ ದೆಹಲಿ ಕರ್ನಾಟಕ ಸಂಘದ ಸಂತಾಪಗಳು.**


### Statement of Ownership and other Particulars about
### Delhi Karnataka Sangha's ABHIMATA
### FORM-IV (See Rule 8)

| | | |
|---|---|---|
| **Place of Publication** | : | Delhi Karnataka Sangha, New Delhi |
| **Periodicity of Pub** | : | Monthly |
| **Printers Name** | : | M/s Saujanya Printing Press, C-95, Okhla Industrial Area, Phase-I, New Delhi-110020 |
| **Publishers Name** | : | C.M. Nagaraja |
| **Nationality** | : | Indian |
| **Address** | : | Delhi Karnataka Sangha Rao Tularam Marg, Sector-12, R.K. Puram, New Delhi - 110022 |
| **Editor's Name** | : | Dr. Avanindranath Rao Y |
| **Nationality** | : | Indian |
| **Address** | : | As Above |
| **Name & Address** of Individual who own the News Paper | : | Delhi Karnataka Sangha Rao Tularam Marg, Sector-12 R.K. Puram, New Delhi- 110022 |

I, **C.M. Nagaraja,** hereby declare that the particulars given above are true to the best of my knowledge and belief.

**09.03.2019** **Sd\-**
**New Delhi** **Publisher**




ದಿನಾಂಕ 06.02.2019ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಮತ್ತು ನಿಯೋಗ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರದ ನೇಮಕಾತಿಗಳಲ್ಲಿ ಸ್ಥಳೀಯರಿಗೆ ಪ್ರಾತಿನಿಧ್ಯ ಕಲ್ಪಿಸುವುದೂ ಸೇರಿದಂತೆ ಮತ್ತು ಬಾಕಿಯಿರುವ ಹಲವಾರು ಕನ್ನಡದ ಕೆಲಸಗಳ ಬಗ್ಗೆ ತುರ್ತು ಕ್ರಮ ಕೈಗೊಳ್ಳುವಂತೆ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಲು ದೆಹಲಿಗೆ ಬಂದಿದ್ದರು. ಈ ಸಂದರ್ಭದಲ್ಲಿ ಸಂಘಕ್ಕೆ ಭೇಟಿ ನೀಡಿದಾಗ ಅವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು.


ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

**SAUJANYA**
**PRINTING PRESS**

A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

Delhi Karnataka Sangha’sAbhimatha Monthly,
Mar-2019, Vol. No.29, Issue No.5, Price Rs.1/-
RNI Regn. No. 53405/91, DL-SW-1/4016/19-21
Date of Publication : Mar 8th / 9th, Posting Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022, Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

